# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+
Digital E-PAPER READERS



No.1 HAMPI TIMES LEADING VIJAYANAGARA District News Paper

Contact for Advertisements: 9448633038

ಸಂಪುಟ:02 • ಸಂಚಿಕೆ: 193 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 02.02.2025 • ಭಾನುವಾರ • ಪುಟ:04 • ಬೆಲೆ:2
Volume:02 • Issue: 193 • PRGI No:KARKAN/2023/88055 • VIJAYANAGARA • 02.02.2025 • Sunday • Page:04 • Rs:2

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




## ಮೈಕ್ರೋ ನ್ಯೂಸ್

### ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿ ಸ್ಥಳಾಂತರ

**ಹಂಪಿ ಟೈಮ್ಸ್ ಹೊಸಪೇಟೆ**



ವಿಜಯನಗರ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಜಿಲ್ಲಾ ಕಚೇರಿಯನ್ನು ತಹಶೀಲ್ದಾರರ ಕಚೇರಿ ಆವರಣದಿಂದ ನಗರದ ಪುಣ್ಯಮೂರ್ತಿ ಈಶ್ವರಪ್ಪ ವೃತ್ತದ ಬಳಿಯಿರುವ ಹಳೆಯ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ ಎಂದು ಹಿರಿಯ ಸಹಾಯಕ ನಿರ್ದೇಶಕರಾದ ಬಿ.ಧನಂಜಯಪ್ಪ ತಿಳಿಸಿದ್ದಾರೆ.

### ಪ್ಯಾಕೇಜ್ ಅಂಗಡಿ ಮೇಲೆ ದಾಳಿ 515 ಕೆಜಿ ಪ್ಲಾಸ್ಟಿಕ್ ವಶ, ಅಂಗಡಿಗೆ ಬೀಗ



**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರಸಭೆ ವ್ಯಾಪ್ತಿಯಲ್ಲಿ ಹನುಮಾನ್ ಪ್ಯಾಕೇಜ್ ಅಂಗಡಿಯ ಮೇಲೆ ಶನಿವಾರ ನಗರಸಭೆ ಅಧಿಕಾರಿಗಳು ದಾಳಿಮಾಡಿ, ಗೋಡನ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 515 ಕೆಜಿ ಪ್ಲಾಸ್ಟಿಕ್ ವಶಪಡಿಸಿಕೊಂಡು, ಅಂಗಡಿಯನ್ನು ಬಂದ್ ಮಾಡಲಾಗಿದೆ ಎಂದು ನಗರಸಭೆ ಪೌರಾಯುಕ್ತ ನಾಗರಾಜ ಮನೋಹರ ತಿಳಿಸಿದ್ದಾರೆ.

# ಸತ್ಯ ಶುದ್ಧ ಕಾಯಕದಿಂದ ಶ್ರೇಯಸ್ಸು ಪ್ರಾಪ್ತಿ

**ಖಾದಿ ಖಾಕಿ ಮತ್ತು ಕಾವಿ ಜನಾಂಗವು ನಿರ್ಮಲ ಮನಸ್ಸಿನಿಂದ ಕಾಯಕ ಮಾಡಿದರೆ, ಜನಕಲ್ಯಾಣದ ಜೊತೆಗೆ ಲೋಕ ಕಲ್ಯಾಣವಾಗುವುದು**

**ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳ ಆಶೀರ್ವಚನ | ಹಂಪಸಾಗರದಲ್ಲಿ ಪೀಠಾರೋಹಣ ವರ್ಧಂತಿ ಮಹೋತ್ಸವ**





**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಮಾನವ ಧರ್ಮದ ಆದರ್ಶ ಮೌಲ್ಯಗಳನ್ನು ಅರಿತು ಬಾಳಬೇಕು. ಮನುಷ್ಯನಲ್ಲಿ ಆತ್ಮ ಬಲ ಬೆಳೆಯಲು ಆಧ್ಯಾತ್ಮದ ಹಸಿವಿರಬೇಕು. ಸತ್ಯ ಶುದ್ಧ ಕಾಯಕ ಜೀವನದ ಶ್ರೇಯಸ್ಸಿಗೆ ಕಾರಣವೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ತಾಲೂಕಿನ ಹಂಪಸಾಗರ ಗ್ರಾಮದಲ್ಲಿ 34ನೇ ವರ್ಷದ ಪೀಠಾರೋಹಣ ವರ್ಧಂತಿ ಮಹೋತ್ಸವ ಹಾಗೂ ಕೃಷಿ ಮೇಳ ಸಮಾರಂಭದ ಸಾನ್ನಿಧ್ಯ ವಹಿಸಿ ಶನಿವಾರ ಆಶೀರ್ವಚನ ನೀಡಿದರು. ಅನಾರೋಗ್ಯಕರ ಸಮಾಜ ನಿರ್ಮಾಣಕ್ಕೆ ಅಡಿಗಲ್ಲು ಇಡುವ ಜನರ ಸಂಖ್ಯೆ ಹೆಚ್ಚಾಗುತ್ತಿದೆ. ಮನುಷ್ಯ ಜಾಗೃತಗೊಂಡು ಆದರ್ಶ ಸಂಸ್ಕೃತಿ ಉಳಿವಿಗಾಗಿ ಶ್ರಮಿಸಬೇಕಾಗಿದೆ. ಉತ್ತಮ ಚಿಂತನೆಗಳು ನಮ್ಮ ಬದುಕಿನ ಜೊತೆಗೆ ಪರರ ಬದುಕಿಗೂ ಬೆಳಕಾಗಬಲ್ಲದು. ಒಂದೇ ನಿಮಿಷದಲ್ಲಿ ಬದುಕು ಬದಲಾಗದು. ಆ ಘಳಿಗೆಯಲ್ಲಿ ತೆಗೆದುಕೊಂಡ ನಿರ್ಣಯ ಮತ್ತು ಮತ್ತು ಸಾಧನೆಯಿಂದ ಬದುಕು ಬದಲಾಗುತ್ತದೆ. ಧರ್ಮ ನಮಗೆ ಏನು ಕೊಟ್ಟಿದೆ ಅನ್ನುವುದಕ್ಕಿಂತ ನಾವು ಧರ್ಮಕ್ಕಾಗಿ ದೇಶಕ್ಕಾಗಿ ಏನು ಕೊಟ್ಟಿದ್ದೇವೆ ಎಂಬ ಅರಿವು ಆದರ್ಶಗಳಿರಬೇಕು. ಜೀವನಾಧಾರಕ್ಕೆ ಅನ್ನ ನೀರು ಗಾಳಿ ಅವಶ್ಯಕವಾಗಿರುವಂತೆ ಜೀವನದ ಉನ್ನತಿಗೆ ಶ್ರೇಯಸ್ಸಿಗೆ ನಿರಂತರ ಪ್ರಯತ್ನ ಮತ್ತು ಸಾಧನೆ ಮುಖ್ಯವಾಗಿದೆ. ಪುಸ್ತಕದ ಪುಟ ಬದಲಾಯಿಸಬಹುದು. ಆದರೆ ಇತಿಹಾಸವನ್ನು ಬದಲಿಸಲು ಸಾಧ್ಯವಿಲ್ಲ. ಖಾದಿ ಖಾಕಿ ಮತ್ತು ಕಾವಿ ಜನಾಂಗವು ನಿರ್ಮಲ ಮನಸ್ಸಿನಿಂದ ಕಾಯಕ ಮಾಡಿದರೆ ಜನಕಲ್ಯಾಣದ ಜೊತೆಗೆ ಲೋಕ ಕಲ್ಯಾಣವಾಗುವುದು. ಬಿತ್ತಿದ ಬೀಜ ಫಸಲು ಹ್ಯಾಗೋ ಹಾಗೆಯೇ ಅವರವರ ಆಚರಣೆಯಿಂದ ಫಲ ಪ್ರಾಪ್ತಿ ದೊರಕುತ್ತದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಮೌಲ್ಯಾಧಾರಿತ ವಿಚಾರ ಧಾರೆಗಳು ಸಕಲರ ಶ್ರೇಯಸ್ಸಿಗೆ ಕಾರಣವಾಗಿವೆ. 33 ವರುಷ ಪೂರ್ಣಗೊಂಡು 34ನೇ ವರುಷದ ಪೀಠಾರೋಹಣ ವರ್ಧಂತಿ ಮಹೋತ್ಸವ ಹಂಪಸಾಗರದಲ್ಲಿ ಜರುಗುತ್ತಿರುವುದು ಸಂತೋಷದ ಸಂಗತಿ. ಈ ಪವಿತ್ರ ಸಮಾರಂಭದ ಯಶಸ್ವಿಗಾಗಿ ಶ್ರಮಿಸಿದ ಅಭಿನವ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಮತ್ತು ಈ ಭಾಗದ ಭಕ್ತರೆಲ್ಲರ ಭಕ್ತಿ ಶ್ರದ್ಧಾ ಮನೋಭಾವ ಈ ಸಮಾರಂಭಕ್ಕೆ ಸಾಕ್ಷಿಯಾಗಿದೆ ಎಂದರು.

ಸಮಾರಂಭದ ನೇತೃತ್ವ ವಹಿಸಿದ ಹಂಪಸಾಗರ ನವಲಿ ಹಿರೇಮಠದ ಅಭಿನವ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಬೆಳೆದು ನಿಂತ ಮರ, ಹರಿಯುವ ನೀರು, ಬೀಸುವ ಗಾಳಿ, ನಿಂತ ನೆಲ ಪರೋಪಕಾರಗಳನ್ನು ಎತ್ತಿ ತೋರಿಸುತ್ತವೆ. ಜೀವನದಲ್ಲಿ ಕರ್ತವ್ಯ, ಶಿಸ್ತು, ಶ್ರದ್ಧೆ, ಛಲ ಮತ್ತು ಸಮರ್ಪಣಾ ಮನೋಭಾವ ಬೆಳೆದು ಬಂದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಶ್ರೀ ರಂಭಾಪುರಿ ಜಗದ್ಗುರುಗಳವರ 34ನೇ ವರ್ಷದ ಪೀಠಾರೋಹಣ ಹಂಪಸಾಗರದಲ್ಲಿ ಸಂಯೋಜನೆಗೊಂಡಿರುವುದು ಈ ಭಾಗದ ಭಕ್ತರ ಸೌಭಾಗ್ಯವಾಗಿದೆ. ಶ್ರೀ ಮಹದೇವ ತಾತನವರ ಜಾತ್ರಾ ಮಹೋತ್ಸವ ಅಂಗವಾಗಿ ಜಗದ್ಗುರುಗಳ 34ನೇ ವರ್ಧಂತಿ, ಕೃಷಿ ಮೇಳ ಹಾಗೂ ಧರ್ಮ ಜಾಗೃತಿ ಸಮಾರಂಭ ಹಮ್ಮಿಕೊಂಡಿರುವುದು ನಮ್ಮೆಲ್ಲರಿಗೆ ಅಪಾರ ಸಂತೋಷ ತಂದಿದೆ ಎಂದರು.

ಈ ಪವಿತ್ರ ಧರ್ಮ ಸಮಾರಂಭದಲ್ಲಿ ನೆಗಳೂರು ಗುರುಶಾಂತ ಶಿವಾಚಾರ್ಯರು, ಅಮ್ಮಿನಬಾವಿ ಅಭಿನವ ಶಾಂತಲಿಂಗ ಶಿವಾಚಾರ್ಯರು, ಹಿರೇವಡ್ಡಟ್ಟಿ ಹಿರೇಮಠದ ವೀರೇಶ್ವರ ಶಿವಾಚಾರ್ಯರು, ಅಂಗೂರು ಹಿರೇಮಠದ ಶಿವಯೋಗಿ ಶಿವಾಚಾರ್ಯರು, ಕೂಡಿಗಿ ಡಾ.ಪ್ರಶಾಂತ ಸಾಗರ ಶಿವಾಚಾರ್ಯರು ನುಡಿ ನಮನ ಸಲ್ಲಿಸಿದರು. ಗಣ್ಯರು ಮತ್ತು ದಾನಿಗಳು ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರುರಕ್ಷೆ ಸ್ವೀಕರಿಸಿದರು.

ಹಗರಿಬೊಮ್ಮನಹಳ್ಳಿ ಶಾಸಕ ನೇಮಿರಾಜ್ ನಾಯಕ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಹೂವಿನಹಡಗಲಿ ಶಾಸಕ ಕೃಷ್ಣಾ ನಾಯಕ ರೋಣ ಶಾಸಕ ಜಿ.ಎಸ್.ಪಾಟೀಲ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಶ್ರೀಮದ್ ಜಗದ್ಗುರು ರೇಣುಕಾಚಾರ್ಯರ ಮಹಿಮೆಗಳು ಹಾಗೂ ಬೋಧಾಮೃತಿ ಕೃತಿ ಬಿಡುಗಡೆಗೊಂಡಿತು.

ಸಮಾರಂಭಕ್ಕೂ ಮುನ್ನ ಗ್ರಾಮದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳವರ ಬೆಳ್ಳಿ ಅಡ್ಡಪಲ್ಲಕ್ಕಿ ಮಹೋತ್ಸವ ಸಕಲ ವಾದ್ಯ ವೈಭವಗಳೊಂದಿಗೆ ಸಂಭ್ರಮದಿಂದ ಜರುಗಿತು. ಸಹಸ್ರಾರು ಭಕ್ತರು ಪಾಲ್ಗೊಂಡು ಜಗದ್ಗುರುಗಳವರ ದರ್ಶನಾಶೀರ್ವಾದ ಪಡೆದರು. ಆಗಮಿಸಿದ ಸಕಲ ಸದ್ಭಕ್ತರಿಗೂ ಅನ್ನ ದಾಸೋಹ ಜರುಗಿತು.

# ಕಣಕ್ಕೆ ಆಕಸ್ಮಿಕ ಬೆಂಕಿ: 55 ಕುರಿ – 2 ಟಗರು ಕರಕಲು

**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಅಮಲಾಪುರ ಗ್ರಾಮದಲ್ಲಿ ಶುಕ್ರವಾರ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಕಣಕ್ಕೆ ಆಕಸ್ಮಿಕ ಬೆಂಕಿ ಸಂಭವಿಸಿ ಸುಮಾರು 50ಕ್ಕೂ ಹೆಚ್ಚು ಕುರಿ, ಮೇಕೆ ಮರಿಗಳು ಸುಟ್ಟು ಕರಕಲಾಗಿವೆ. ಗ್ರಾಮದ ಗಿರಿಜಮ್ಮ ದೇವದಾಸಿ ಅವರಿಗೆ ಸೇರಿದ 15 ಕುರಿ ಮರಿಗಳು 2 ಟಗರು ಹಾಗೂ ಮಡಿವಾಳರ ಶೇಖರಪ್ಪ ಇವರಿಗೆ ಸಂಬಂಧಿಸಿದ 40 ಕುರಿ, ಮೇಕೆ ಮರಿಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿವೆ. ಈ ಅವಘಡದಿಂದ ಲಕ್ಷಾಂತರ ರೂ ನಷ್ಟವಾಗಿದೆ. ಘಟನೆಯ ಸುದ್ದಿ ತಿಳಿದ ತಕ್ಷಣ



ಕೂಡ್ಲಿಗಿ ಕ್ಷೇತ್ರದ ಶಾಸಕ ಡಾ.ಎನ್.ಟಿ ಶ್ರೀನಿವಾಸ್ ಅವರ ಸೂಚನೆ ಮೇರೆಗೆ ಆಪ್ತ ಸಹಾಯಕರು ಸ್ಥಳಕ್ಕೆ ಭೇಟಿ ನೀಡಿ ಕುರಿಗಳನ್ನು ಕಳೆದುಕೊಂಡು ನಷ್ಟಕ್ಕೀಡಾಗಿರುವ ಗಿರಿಜಮ್ಮ ದೇವದಾಸಿ ಹಾಗೂ ಮಡಿವಾಳರ ಶೇಖರಪ್ಪ ಅವರಿಗೆ ವೈಯಕ್ತಿಕವಾಗಿ ಪರಿಹಾರ ನೀಡಲಾಯಿತು. ಘಟನಾ ಸ್ಥಳಕ್ಕೆ ತಾಹಶೀಲ್ದಾರ್ ಎಂ. ರೇಣುಕಾ ಹಾಗೂ ಅಗ್ನಿಶಾಮಕ ಸಿಬ್ಬಂದಿಗಳು ಮತ್ತು ಪಶುವೈದ್ಯರು ಭೇಟಿ ನೀಡಿ ಮರಣೋತ್ತರ ಪರೀಕ್ಷೆ ನಡೆಸಿದರು.

# ಬಿಸಿಯೂಟ ತಯಾರಕರ ವೇತನ ಹೆಚ್ಚಳಕ್ಕೆ ಆಗ್ರಹ

**ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫಡೆರೇಷನ್ ತಾಲ್ಲೂಕು ಸಮಿತಿಯಿಂದ ಹೋರಾಟ**




**ಹಂಪಿ ಟೈಮ್ಸ್ ಕೂಡ್ಲಿಗಿ**

ಬಿಸಿಯೂಟ ತಯಾರಕರ ವೇತನ ಹೆಚ್ಚಳ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂಬರುವ ರಾಜ್ಯ ಬಜೆಟ್‌ಲ್ಲಿ ಈಡೇರಿಸಬೇಕು ಎಂದು ಒತ್ತಾಯಿಸಿ ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫಡೆರೇಷನ್ ತಾಲ್ಲೂಕು ಸಮಿತಿಯಿಂದ ಶನಿವಾರ ತಹಶೀಲ್ದಾರರ ಮುಖಾಂತರ ಮುಖ್ಯ ಮಂತ್ರಿಗೆ ಮನವಿ ಸಲ್ಲಿಸಿದರು.

ವೇತನ ಹೆಚ್ಚಳದ ಆರನೇ ಗ್ಯಾರಂಟಿ ಜಾರಿಗಾಗಿ, ಇಡುಗಂಟು ಹಣ ಜಾರಿ, ಆಸ್ಪತ್ರೆ ಚಿಕಿತ್ಸೆ, ಈ ಮೊದಲಿದ್ದಂತೆ ಬ್ಯಾಂಕ್ ಜಂಟಿ ಖಾತೆ ಮುಂದುವರಿಸುವುದು, 5ನೇ ತಾರೀಖಿಗೆ ವೇತನ ಪಾವತಿಸಲು ಕ್ರಮ ಕೈಗೊಳ್ಳುವುದು, ವಿನಾ ಕಾರಣ ಕಿರುಕುಳ ನೀಡುವುದನ್ನು ನಿಲ್ಲಿಸಲು ಕ್ರಮ ಕೈಗೊಳ್ಳುವುದು, 2024ರ ಏಪ್ರಿಲ್, ಮೇ ತಿಂಗಳ ಬರಗಾಲ ಕಾರ್ಯಕ್ರಮದ ವೇತನ ಪಾವತಿ ಹಾಗೂ ವೇತನ ಹೆಚ್ಚಳ ಮಾಡುವುದು ಸೇರಿದಂತೆ ನಮ್ಮ ಎಲ್ಲಾ ಬೇಡಿಕೆಗಳನ್ನು ಬಜೆಟ್‌ನಲ್ಲಿ ಈಡೇರಿಸಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಗ್ರೇಡ್–2 ತಹಶೀಲ್ದಾರ್ ವಿ.ಕೆ. ನೇತ್ರಾವತಿ ಮನವಿ ಪತ್ರ ಸ್ವೀಕರಿಸಿದರು. ಇದಕ್ಕೂ ಮೊದಲು ತಾಲ್ಲೂಕಿನ ಬಿಸಿಯೂಟ ಕಾರ್ಯಕರ್ತರು ಗಾಂಧೀ ಚಿತಾಭಸ್ಮವಿರುವ ಹುತಾತ್ಮರ ಸ್ಮಾರಕದಿಂದ ಪ್ರತಿಭಟನಾ ಮೆರವಣಿಗೆ ಹೊರಟು ತಾಲ್ಲೂಕು ಕಚೇರಿ ಆವರಣಕ್ಕೆ ಬಂದರು.

ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಚ್. ವೀರಣ್ಣ, ತಾಲ್ಲೂಕು ಕಾರ್ಯದರ್ಶಿ ಕರಿಯಪ್ಪ, ಬಿಸಿಯೂಟ ಕಾರ್ಯಕರ್ತೆಯರಾದ ಜಿ. ಉಷರಾಣಿ, ಜಿ.ಸುಜಾತ, ಕೆ.ಅಂಜಿನಮ್ಮ, ಎಸ್.ಬಿ.ಸಾಕಮ್ಮ, ಕರಿಬಸಮ್ಮ, ರಾಜೇಶ್ವರಿ, ಎನ್.ನಾಗರತ್ನ, ಶಾರದಮ್ಮ ಸೇರಿದಂತೆ ತಾಲ್ಲೂಕಿ ಬಿಸಿಯೂಟ ತಯಾರಕರು ಭಾಗಿಯಾಗಿದ್ದರು.

## ಶಿವಗಣಾರಾಧನೆ



**ಶ್ರೀ ಬಿ.ಶಿವಪ್ಪ**
ನಿವೃತ್ತ ಸಹಾಯಕ ಇಂಜಿನೀಯರ್

ಆತ್ಮೀಯ ಬಂಧು-ಮಿತ್ರರೆ,
ನನ್ನ ಪತಿ ನಿವೃತ್ತ ಸಹಾಯಕ ಇಂಜಿನೀಯರ್ ಶ್ರೀ ಬಿ. ಶಿವಪ್ಪ ಇವರು ದಿ: 26-01-2025 ರಂದು ಭಾನುವಾರ ಲಿಂಗೈಕ್ಯರಾದರೆಂದು ತಿಳಿಸಲು ಅತೀವ ದುಃಖವಾಗುತ್ತಿದೆ. ಇವರ "ಶಿವಗಣಾರಾಧನೆ"ಯನ್ನು ದಿ.03-02-2025 ರಂದು ಸೋಮವಾರ ಮಧ್ಯಾಹ್ನ: 12.30ಕ್ಕೆ ಹರಪನಹಳ್ಳಿ ತಾಲೂಕು ನೀಲಗುಂದದ ಸ್ವಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು
ಪತ್ನಿ : ದೇವಿಕ, ಪುತ್ರಿ: ವಿನುತಾ ಹಾಗೂ ಬಂಧುಗಳು
ನೀಲಗುಂದಾ .ಹರಪನಹಳ್ಳಿ, ವಿಜಯನಗರ ಜಿಲ್ಲೆ

ವಿಜಯನಗರ

ಭಾನುವಾರ/Sunday 02.02.2025

ಹಂಪಿ ಟೈಮ್ಸ್ HAMPI TIMES

# ಸ್ಟುಡೆಂಟ್ ಕಾಲಂ

## ಜೀವನವನ್ನೇ ಬದಲಿಸಿದ ನಮಸ್ಕಾರ



ರಾಮನಗರ ಎಂಬ ಊರಿನಲ್ಲಿ ನಾಲ್ವರು ಗೆಳೆಯರಿದ್ದರು. ಅವರು ದಿನಾಲೂ ಕಾಲೇಜಿಗೆ ಹೋಗುತ್ತಿದ್ದರು. ಅದರಲ್ಲಿ ಸಚಿನ್ ಎಂಬ ಹುಡುಗ ಚೆನ್ನಾಗಿ ಓದುತ್ತಿದ್ದ. ಆದರೆ ಅವರನು ತುಂಬಾ ಬಡ ಹುಡುಗನಾಗಿದ್ದ. ಅಗತ್ಯವಿರುವ ಪುಸ್ತಕಗಳನ್ನು ಕೊಂಡುಕೊಳ್ಳಲೂ ಆಗುತ್ತಿರಲಿಲ್ಲ. ಕಾಲೇಜಿನ ಲೈಬ್ರರಿಯಿಂದ ಪುಸ್ತಕಗಳನ್ನು ಪಡೆದು ಓದುತ್ತಿದ್ದ.

ಒಂದು ದಿನ ಗೆಳೆಯರೆಲ್ಲರೂ ಟ್ರಿಪ್ ಹೋಗಲು ನಿರ್ಧರಿಸಿದರು. ಆದರೆ ಸಚಿನ್ ನಾನು ಬರುವುದಿಲ್ಲ ಎಂದು ತಿಳಿಸಿದನು. ಕಾರಣ ಕೇಳಿದಾಗ ನನ್ನ ಬಳಿ ಹಣ ಇಲ್ಲ ಎಂದನು. ಆಗ ಸ್ನೇಹಿತರು 'ನೀನು ಹಣ ಕೊಡುವುದು ಬೇಡ. ನಮ್ಮ ಜೊತೆ ಬಾ' ಎಂದರು. ಆಗ ಸಚಿನ್ ಸ್ನೇಹಿತರ ಜೊತೆಗೆ ಟ್ರಿಪ್ ಹೋದನು.

ಇದುವರೆಗೂ ತನ್ನ ಜೀವನದಲ್ಲಿ ಎಂದೂ ಟ್ರಿಪ್‌ಗೆ ಹೋಗಿರದ ಸಚಿನ್‌ಗೆ ಇದು ತುಂಬಾ ಮಜ ಎನಿಸಿತು. ಜೊತೆಗೆ ಹೊರಗಿನ ಪ್ರಪಂಚದಲ್ಲಿ ತಾನು ಕಂಡ ಅನೇಕ ಅಂಶಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿದನು. ಅದರಲ್ಲಿ ಮುಖ್ಯವಾಗಿ ಎಲ್ಲರಿಗೂ ನಮಸ್ಕಾರ ಅಣ್ಣ, ನಮಸ್ಕಾರ ಅಕ್ಕ ಎಂದು ಹೇಳುವುದನ್ನು ರೂಢಿಸಿಕೊಂಡ.

ಹೀಗೆ ಒಂದು ದಿನ ಕಾಲೇಜಿನಿಂದ ಮರಳುವಾಗ ಅಲ್ಲಿ ಹಿರಿಯೊಬ್ಬರನ್ನು ನೋಡಿ ಅವರಿಗೆ ನಮಸ್ಕಾರ ಸರ್ ಎಂದನು. ಪಕ್ಕದಲ್ಲಿದ್ದ ಸ್ನೇಹಿತ 'ಅವರಿಗೇಕೆ ನಮಸ್ಕಾರ ಹೇಳಿದೆ?' ಎಂದನು. ಅವರು ಹಿರಿಯರಲ್ವಾ ಅದಕ್ಕೆ ಹೇಳಿದೆ ಎಂದು ಮುಂದೆ ನಡೆದನು. ಹೀಗೆ ಅದೇ ಹಿರಿಯ ವ್ಯಕ್ತಿ ಕಂಡಾಗಲೆಲ್ಲ ನಮಸ್ಕಾರ ಹೇಳುತ್ತಿದ್ದನು.



ಡಿಗ್ರಿ ಮುಗಿಸಿದ ನಂತರ ಸಚಿನ್‌ಗೆ ಒಂದು ಕಂಪನಿಯಲ್ಲಿ ಕೆಲಸಕ್ಕೆ ಆರ್ಡರ್ ಬಂದಿತು. ಮೊದಲು ಇಂಟರ್‌ವ್ಯೂಗೆ ಹಾಜರಾಗಬೇಕಿತ್ತು. ಆ ಕೆಲಸಕ್ಕೆ ಇಬ್ಬರಿಗೆ ಇಂಟರ್‌ವ್ಯೂ ಬಂದಿದ್ದರು. ಅಲ್ಲಿನ ಅಧಿಕಾರಿಗಳು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಇಬ್ಬರೂ ಸಮನಾಗಿ ಉತ್ತರಿಸಿದ್ದರು. ಅಧಿಕಾರಿಗಳಿಗೆ ಯಾರನ್ನು ಆಯ್ಕೆ ಮಾಡುವುದು ಎಂದು ಗೊಂದಲವಾಯಿತು. ನಂತರ ಒಂದು ಪ್ಲಾನ್ ಮಾಡಿದರು. ಇಬ್ಬರಿಗೂ ತಿಳಿಯದಂತೆ ಅಂಗಿಯಲ್ಲಿ ಮೈಕ್ರೋಕ್ಯಾಮೆರಾ ಫಿಕ್ಸ್ ಮಾಡಿದರು. ಒಂದೆರಡು ಗಂಟೆ ಪೇಟೆಯಲ್ಲಿ ಸುತ್ತಾಡಿ ಬರಲು ತಿಳಿದರು. ಇಬ್ಬರೂ ಒಂದೊಂದು ದಿಕ್ಕಿಗೆ ಹೋದರು. ವಾಪಾಸು ಬರುವ ವೇಳೆಗೆ ಸಚಿನ್ ಕೆಲಸಕ್ಕೆ ಆಯ್ಕೆಯಾಗಿದ್ದ.

ಇಬ್ಬರಿಗೂ ಕ್ಯಾಮೆರಾ ಫಿಕ್ಸ್ ಮಆಡಿದ ಅಧಿಕಾರಿಗಳು ಅವರ ಚಲನ-ವಲನಗಳನ್ನು ಗಮನಿಸುತ್ತಿದ್ದರು. ಸಚಿನ್ ಪೇಟೆಯಲ್ಲಿ ಕಂಡವರಿಗೆಲ್ಲಾ ನಮಸ್ಕಾರ ಹೇಳುತ್ತಿದ್ದನು. ವಿನಯದಿಂದ ನಡೆದುಕೊಳ್ಳುತ್ತಿದ್ದನು. ಆದರೆ ಇನ್ನೊಬ್ಬನು ಯಾರನ್ನೂ ಮಾತಾಡಿಸದೇ ತನ್ನ ಪಾಡಿಗೆ ತಾನು ಇದ್ದನು. ಇದನ್ನು ಗಮನಿಸಿದ ಅಧಿಕಾರಿಗಳು ಸಚಿನ್‌ನನ್ನು ಕೆಲಸಕ್ಕೆ ಆಯ್ಕೆ ಮಾಡಿಕೊಂಡಿದ್ದರು. ಒಂದು ನಮಸ್ಕಾರದ ಪದ್ಧತಿ ಸಚಿನ್‌ನ ಜೀವನವನ್ನು ಬದಲಾಯಿಸಿತ್ತು.

**ವಿನಯಕುಮಾರ. ಯು. 9ನೇ ತರಗತಿ**
**ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹಗರಿಬೊಮ್ಮನಹಳ್ಳಿ(ತಾ)**

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
**ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ**
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

**ತೆಲುಗಿನಲ್ಲಿ ಬರೆದ ಹಂಪಿ ನುಂಚಿ ಹರಪ್ಪದಾಕ ಎಂಬ ಇವರ ಆತ್ಮ ಚರಿತೆ ಅತ್ಯಂತ ಜನಪ್ರಿಯವಾಗಿ ಮೂರು ಮುದ್ರಣಗಳನ್ನು ಕಂಡಿದೆ. ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ಲಭಿಸಿದೆ. ಈ ತೆಲುಗಿನ ಕೃತಿಯನ್ನು ಹಂಪಿಯಿಂದ ಹರಪ್ಪಾದವರೆಗೆ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದ ಮಾಡಿದ್ದಾರೆ ಕನ್ನಡದ ಹೆಸರಾಂತ ವಿದ್ವಾಂಸರು, ಶಾಸನ ತಜ್ಞರಾದ ಡಾ.ಶೇಷಶಾಸ್ತ್ರಿ.**

### ಹಂಪಿ ಅಂಗಳದಲ್ಲಿ ಬಾಲ್ಯ ಆಂಧ್ರದಲ್ಲಿ ಪ್ರಸಿದ್ಧಿ – ತೆಲುಗಿನ ಪ್ರಸಿದ್ಧ ಸಾಹಿತಿ ಡಾ. ತಿರುಮಲ ರಾಮಚಂದ್ರ

# ಹಂಪಿಯಿಂದ ಹರಪ್ಪಾದವರೆಗೆ ಜನಪ್ರಿಯ ಕೃತಿ

ಸ್ವಾತಂತ್ರ್ಯ ಹೋರಾಟಗಾರರಾಗಿ, ಗಾಂಧೀಜಿಯನ್ನು ಬಾಲ್ಯದಲ್ಲಿ ಬಳ್ಳಾರಿಯಲ್ಲಿ ದೂರದಿಂದಲೇ ಕಂಡು ಪುಳುಕಗೊಂಡ ಇವರು ಮುಂದೊಂದು ದಿನ ಇಡೀ ರಾತ್ರಿ ಕಾರಿನಲ್ಲಿ ಅವರೊಂದಿಗೆ ಮದ್ರಾಸಿಗೆ ಪ್ರಯಾಣ ಬೆಳೆಸುವ ಅವಕಾಶವನ್ನು ಪಡೆದುಕೊಂಡು, ಮದರಾಸಿನಲ್ಲಿ ಗಾಂಧಿಯೊಂದಿಗೆ ಹರಿಜನ ಚಳುವಳಿಯಲ್ಲಿ ಪಾಲ್ಗೊಂಡಿದ್ದವರು. ಮತ್ತೊಂದು ಸಂದರ್ಭದಲ್ಲಿ ಇದೇ ಮದ್ರಾಸಿನಲ್ಲಿ ಸುಭಾಷ್ ಚಂದ್ರ ಬೋಸ್ ಅವರನ್ನು ಸಹ ಹತ್ತಿರದಿಂದ ಕಂಡಿದ್ದವರು. ಸ್ವಾತಂತ್ರ್ಯ ಚಳುವಳಿಯಲ್ಲಿ ಅನೇಕ ಹೋರಾಟಗಳಲ್ಲಿ ಭಾಗವಹಿಸಿದ್ದ ಇವರು ತಿರುಪತಿಯಲ್ಲಿ ಕಾಲೇಜಿನ ಕಟ್ಟಡದ ಮೇಲೆ ಭಾರತದ ಭಾವುಟ ಕಟ್ಟಿ ಬಂಧನಕ್ಕೆ ಒಳಗಾಗಿದ್ದವರು. ವಿದ್ಯಾರ್ಥಿ ದಿಸೆಯಲ್ಲಿಯೇ ಸೆರೆಮನೆ ಶಿಕ್ಷೆಯನ್ನು ಅನುಭವಿಸಿದ್ದ ಇವರು. ಎರಡನೇ ಮಹಾಯುದ್ಧದ ಸೈನಿಕರಾಗಿ ಬ್ರಿಟನ್ ಪ್ರಧಾನಿ ಚರ್ಚಿಲ್ಲ ರನ್ನು ಹತ್ತಿರದಿಂದ ಕಂಡಿದ್ದವರು. ಕನ್ನಡ, ಸಂಸ್ಕೃತ, ಹಿಂದಿ, ಪ್ರಾಕೃತ, ತೆಲುಗು, ತಮಿಳು, ಇಂಗ್ಲೀಷ್ ಹೀಗೆ ಬಹು ಭಾಷೆಗಳನ್ನು ಬಲ್ಲವರು. ತೆಲುಗು ಸಾಹಿತ್ಯದ ಪ್ರಸಿದ್ಧ ಲೇಖಕರು, ಅಂಕಣಕಾರರು, ಸಾಹಿತಿಗಳು ."ಹಂಪಿಯಿಂದ ಹರಪ್ಪಾದವರೆಗೆ" ಎನ್ನುವ ಬಾಲ್ಯ ದಿಂದ 30 ವರ್ಷದ ವಯಸ್ಸಿನವರೆಗಿನ ಆತ್ಮ ಕಥನ ಬರೆಯುವ ಮೂಲಕ ತೆಲುಗಿನಲ್ಲಿ ಜನಪ್ರಿರಾಗಿದ್ದ ಸಾಹಿತಿ ಡಾ.ತಿರುಮಲ ರಾಮಚಂದ್ರ.

ಇವರು ವಿದ್ಯಾರ್ಥಿ ದಿಸೆಯಿಂದಲೇ ಭಾರತದ ಉದ್ದಗಲಕ್ಕೂ ಸಂಚರಿಸಿ ಸಂಸ್ಕೃತಾಭ್ಯಾಸ ಇಂಗ್ಲೀಷ್ ಅಭ್ಯಾಸ ಮಾಡುತ್ತಲೆ, ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದವರು. ತಮ್ಮ ಅಧ್ಯಯನ ಮತ್ತು ಹೋರಾಟಗಳಿಂದ ಪಡೆದ ಜ್ಞಾನ, ಅನುಭವ ಅಪಾರ. ತಮ್ಮ ಜ್ಞಾನ ಮತ್ತು ಅನುಭವವನ್ನು ತೆಲುಗು ಸಾಹಿತ್ಯದ ಮೂಲಕ ಜನರಿಗೆ ತಲುಪಿಸಿ ತೆಲುಗು ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಮಾಡಿದ್ದವರು. ಸಂಸ್ಕೃತದಲ್ಲಿ 27, ಹಿಂದಿಯಲ್ಲಿ ಒಂದು, ತೆಲುಗಿನಲ್ಲಿ 24 ಅನುವಾದಿತ, ಸಂಪಾದಿತ ಕೃತಿಗಳನ್ನು ಪ್ರಕಟಿಸಿರುವ ಇವರು ಕನ್ನಡಿಗರಾಗಿದ್ದು, ಅದರಲ್ಲೂ ವಿಶೇಷವಾಗಿ ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕಿನ ಕಮಲಾಪುರದಲ್ಲಿ ಬೆಳೆದು ಬಂದು ಇಲ್ಲಿಯ ಗುಡಿಗುಂಡಾರಗಳಲ್ಲಿ ಅಕ್ಷರಾಭ್ಯಾಸವನ್ನು ಪ್ರಾರಂಭಿಸಿ, ಹಂಪಿಯ ಸಾಂಸ್ಕೃತಿಕ ಪರಿಸರದಲ್ಲಿ ಬೆಳೆಯುತ್ತಾ, ಮುಂದೆ ದೇಶದ ಹತ್ತಾರು ಕಡೇ ವಿದ್ಯಾಭ್ಯಾಸ ಮಾಡಿ, ಲಾಹೋರ್ ನಲ್ಲಿ (ಈಗ ಪಾಕಿಸ್ತಾನದಲ್ಲಿದೆ) ಹಾಗೂ ಪಂಜಾಬಿನಲ್ಲಿ ಪದವಿಯನ್ನು ಪಡೆದುಕೊಂಡಿದ್ದವರು.. ಜೀವನಕ್ಕಾಗಿ ಆಂಧ್ರದಲ್ಲಿ ನೆಲೆ ನಿಂತು ಪತ್ರಿಕೋದ್ಯಮದ ವೃತ್ತಿಯನ್ನು ಕೈಗೊಂಡು , ತೆಲುಗು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ ಪ್ರಸಿದ್ಧರಾಗಿದ್ದವರು. ಇವರು ಸ್ವಾತಂತ್ರ್ಯದ ಹೋರಾಟದಲ್ಲಿ ದೇಶದ್ಯಾಂತ ಪರ್ಯಟನೆ ಮಾಡುತ್ತಲೆ ಮಾಡಿದ ಹೋರಾಟಗಳಿಂದ ಹೆಸರು ಮಾಡಿದ್ದ ತಿರುಮಲ ರಾಮಚಂದ್ರ ಇವರ ಸಾಧನೆ, ವ್ಯಕ್ತಿತ್ವ ಕುತೂಹಲವನ್ನುಂಟುಮಾಡುತ್ತದೆ. ಕೇಂದ್ರ ಹಾಗೂ ಆಂಧ್ರಪ್ರದೇಶದ ಹಲವಾರು ಪ್ರಶಸ್ತಿಗಳ ಪುರಸ್ಕೃತರು ಆಗಿದ್ದವರು. ಹಂಪಿಯ ಈ ಪ್ರತಿಭೆ, ಹಂಪಿಯಿಂದ ಲಾಹೋರ್, ಮೊಹೆಂಜೋದಾರೋ ಹರಪ್ಪದವರಿಗೆ ಸಂಚರಿಸಿ ಮಾಡಿದ ಸಾಧನೆ, ಪಡೆದ ಅನುಭವ ಅನ್ಯನ್ಯವಾದದ್ದು. ಬಹುಭಾಷೆ ಹಾಗೂ ಬಹುಮುಖಿ ವ್ಯಕ್ತಿತ್ವದ ತಿರುಮಲ ರಾಮಚಂದ್ರ ಅವರು ನಮ್ಮವರು ಎಂಬ ಹೆಮ್ಮೆಯಿಂದ ಹಂಪಿ ಟೈಮ್ಸ್ ಓದುಗರಿಗಾಗಿ ಈ ಲೇಖನದ ಮೂಲಕ ಪರಿಚಯಿಸುತ್ತಿದೆ.

ಡಾ.ತಿರುಮಲ ರಾಮಚಂದ್ರ, ಈ ಹೆಸರು ಕರ್ನಾಟಕ ಮತ್ತು ಆಂಧ್ರ ಪ್ರದೇಶದ ನಮ್ಮ ಹಿರಿಯ ತಲೆಮಾರಿನ ಜನರಿಗೆ ಪರಿಚಿತ ಹೆಸರು. ಅದರಲ್ಲೂ ತೆಲುಗು ಸಾಹಿತ್ಯ ಕ್ಷೇತ್ರದಲ್ಲಿ ಇವರು ಲೇಖಕರಾಗಿ, ಆಂಧ್ರಪ್ರಭದ ಅಂಕಣಕಾರರಾಗಿ ಜನಪ್ರಿಯರಾಗಿದ್ದವರು. ಆದರೆ ಕರ್ನಾಟಕದ ಇಂದಿನ ಓದುಗರಿಗೆ ಅದರಲ್ಲೂ ಹಂಪಿ ಪ್ರದೇಶದ ಇಂದಿನ ಯುವ ಜನರಿಗೆ ಇವರ ಪರಿಚಯ ಇಲ್ಲವೆಂದೇ ಹೇಳಬಹುದು. ತೆಲುಗಿನ ಸಾಹಿತ್ಯದಲ್ಲಿ ಅನೇಕ ಕೃತಿಗಳನ್ನು ರಚಿಸುವುದರ ಜೊತೆಗೆ ಅಲ್ಲಿನ ಹಿರಿಯ ತೆಲುಗು ಕವಿಗಳು ಕಾದಂಬರಿಕಾರರು, ಕಥೆಗಾರರು, ವಿದ್ವಾಂಸರನ್ನು ಕುರಿತು "ಮರಪುರಾಣಿ ಮನಿಷಿ" ಎಂಬ ಕೃತಿಯನ್ನು ಸಹ ರಚಿಸಿದ್ದಾರೆ. ಕನ್ನಡದ ಸಾಹಿತಿಗಳಾದ ಬೇಂದ್ರೆ , ಕುವೆಂಪು, ಮರಿಯಪ್ಪ ಭಟ್ಟರು, ಶೇಷಯ್ಯಂಗಾರ್ಯ, ಪದ್ಮನಾಭ ಭಟ್ಟರು ಮೊದಲಾದವರನ್ನು ಕುರಿತು ಮರಪುರಾಣಿ ಮನಿಷಿ ಎಂಥಹ ಕೃತಿಯನ್ನು ಕನ್ನಡದಲ್ಲಿ ಪ್ರಕಟಿಸಬೇಕೆಂಬ ಆಸೆಯನ್ನು ಹೊಂದಿದ್ದರು. ಕನ್ನಡದ ಹಲವಾರು ಕಾದಂಬರಿಗಳನ್ನು ತೆಲುಗಿಗೆ ಅನುವಾದಿಸಿದ್ದರು. ಅವುಗಳಲ್ಲಿ ಪ್ರಮುಖವಾದವು ಡಾ. ಶಿವರಾಮ ಕಾರಂತರ ಮರಳಿ ಮಣ್ಣಿಗೆ ಮತ್ತು ಅಳಿದ ಮೇಲೆ ಕೆ.ವಿ.ಅಯ್ಯರ್ ಅವರ ಶಾಂತಲ ಪ್ರಮುಖವಾದವು. ಬೇಂದ್ರೆ, ಕುವೆಂಪು, ಕಾರಂತರ, ಮುದ್ದಣ ಅವರುಗಳನ್ನು ಕುರಿತು ಹೈದರಾಬಾದ್ ಆಕಾಶವಾಣಿಯಲ್ಲಿ ನಿರೂಪಿಸಿದ ಕಾರ್ಯಕ್ರಮ ಅತ್ಯಂತ ಜನಪ್ರಿಯವಾಗಿತ್ತು. ಹೀಗ ಇವರು ಕನ್ನಡ ಸಾಹಿತ್ಯದ ಮೇಲೆ ಪ್ರೀತಿ, ಅಭಿಮಾನವನ್ನು ಹೊಂದಿದ್ದವರು.




**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ: 9449654489**
Scan For Digital Colourful
HAMPI TIMES E-paper

ಡಾ. ತಿರುಮಲ ರಾಮಚಂದ್ರ ಇವರು ತಮ್ಮ ಪತ್ರಿಕೋದ್ಯಮ ವೃತ್ತಿಯ ಜೊತೆಗೆ ಹಲವಾರು ಮಹತ್ವದ ಕೃತಿಗಳ ರಚನೆ ಸಂಪಾದನೆ, ಅನುವಾದವನ್ನುಮಾಡಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಮನ ಲಿಪಿ ಪುಟ್ಟು ಪೂರ್ವೋತ್ತರಾಲು, ನುಡಿ ನಾನುಡಿ, ಸಾಹಿತಿ ಸುಗತುನಿ ಸ್ವಗತಂ, ಗಾಥೆ ಸಪ್ತಶತಿಲೋ ತೆಲುಗು ಪದಾಲು, ಹಿಂದಿವುಲ ಪುಂಡುಗಲು ಪರ್ವಾಲು, ಹಾಲುನಿ ಗಾಥಲು, ಬೃಹದಾರಣ್ಯಕ, ಮನವಿ ಮಾಟಲು, ತೆಲುಗು ಪತ್ರಿಕೆಲು ಸಾಹಿತ್ಯ ಸೇವೆ, ಮೂಡು ವಾಜ್ಞಯ ಶಿಖರಾಲು, ಅಹಂಭೋ ಅಭಿವಾದಯೇ, ಪ್ರಾಕೃತಂಲೋ ರಾಮಾಯಣಾಲು, ಮರಪುರಾನಿ ಮನೀಷಿ, ಹಂಪಿ ನುಂಚಿ ಹರಪ್ಪಾದಾಕ ಹಾಗೂ ಅನುವಾದ ಕೃತಿಗಳು ಲಲೀತ ವಿಸ್ತರಣೆ, ಅವದಾನ ಕಲ್ಪಿಲತ ಮೊದಲಾದವುಗಳು ಇವರು ಮಹತ್ವದ ಕೃತಿಗಳಾಗಿವೆ.




### ಹಂಪಿಯ ಪರಿಸರದಲ್ಲಿ ಬಾಲ್ಯ

ಡಾ.ತಿರುಮಲ ರಾಮಚಂದ್ರ ಇವರ ವಂಶಸ್ಥರು ಆಂಧ್ರದ ರೆಡ್ಡಿ ರಾಜರ, ವಿಜಯನಗರ ಸಾರ್ವಭೌಮರ ಮತ್ತು ಇತರೆ ಪಾಳೇಗಾರರ ಚಿಕ್ಕಪುಟ್ಟ ಮನೆತನಗಳ ಮತ ಗುರುಗಳಾಗಿದ್ದವರು. ಆಂಧ್ರದ ತಾಡಮರ್ರಿ ಪಾಳೇಪಟ್ಟು ಪತನವಾದ ನಂತರ ಇವರು ತಾತ ರಾಮಸ್ವಾಮಿ ತಾತಾಚಾರ್ಯರು ಅವರ ಅತ್ತೆಯ ಊರಾದ ಬಳ್ಳಾರಿ ಜಿಲ್ಲೆಯ ಕಮಲಾಪುರಕ್ಕೆ ವಲಸೆ ಬಂದವರು. ಇವರು ಹಂಪಿಯ ಕೋದಂಡರಾಮಸ್ವಾಮಿ ಮತ್ತು ಪಟ್ಟಾಭಿರಾಮಸ್ವಾಮಿ ಮೊದಲಾದ ವೈಷ್ಣವ ದೇವಾಲಯಗಳಲ್ಲಿ ಪೂಜೆ ಪಾರಾಯಣ ಮಾಡುತ್ತಿದ್ದರು. ಈ ಮನೆಯಲ್ಲಿ ತಿರುಮಲ ರಾಮಚಂದ್ರ ಅವರ ಬಾಲ್ಯ ಜೀವನ ಪ್ರಾರಂಭವಾಯಿತು. ಇವರು ತಮ್ಮ ತಾಯಿಯ ಮನೆಯಲ್ಲಿ 13.6.1913ರಲ್ಲಿ ಜನಿಸಿದ್ದರು. ಬಾಲಕ ರಾಮಚಂದ್ರ ಐದನೇ ವರ್ಷಕ್ಕೆ ಕಾಲಿಟ್ಟಾಗ ಕಮಲಾಪುರದ ಕೂಲಿಮಠಕ್ಕೆ ವಿದ್ಯಾಭ್ಯಾಸಕ್ಕಾಗಿ ಸೇರಿಸಿದರು. ಕಮಲಾಪುರದ ಕೂಲಿ ಮಠದ ಮೇಷ್ಟು ವೀರಶೈವರು. ಶಾಸ್ತ್ರ ವೀರಶೈವ ಆಗಮ ಸಿದ್ಧಾಂತಗಳಲ್ಲಿ ಪಾಂಡಿತ್ಯ ಹೊಂದಿದವ ರಾಗಿದ್ದರು. ಇವರ ಮನೆ ಕಮಲಾಪುರದ ವೀರಭದ್ರ ದೇವಸ್ಥಾನದ ಎದುರುಗಡೆನೇ ಇತ್ತು. ಈ ದೇವಸ್ಥಾನದಲ್ಲೇ ಕೂಲಿಮಠವನ್ನು ನಡೆಸುತ್ತಿದ್ದರು. ಅಲ್ಲಿಯ ಶಿಕ್ಷಕರು ವೀರಶೈವರಾದ ಈಶ್ವರಯ್ಯನವರು. ಇವರ ಬಳಿ ಇವರನ್ನು ಅಕ್ಷರಭ್ಯಾಸಕ್ಕಾಗಿ ಸೇರಿಸಲಾಯಿತು. ಇವರು ಕೂಲಿಮಠಮಕ್ಕೆ ಸೇರಿದಾಗ ಓಣಿಯ ತುಂಬಾ ಹಬ್ಬದ ಸಡಗರವಿತ್ತಂತೆ. ವೀರಭದ್ರನ ಗುಡಿಯಲ್ಲಿ ಒಂದು ವರ್ಷ ಅಮರಕೋಶ ಸೋಮೇಶ್ವರ ಶತಕ ಮೊದಲಾದ ಪದ್ಯಗಳು, ಮಗ್ಗಿಯನ್ನು, ವರ್ಣಮಾಲೆಯನ್ನು ಕಲಿತಿದ್ದರಂತೆ. ಮುಂದೆ ಎರಡನೇ ಕ್ಲಾಸಿಗೆ ಎಲಿಮೆಂಟರಿ ಶಾಲೆಗೆ ಸೇರಿಸಿದಾಗ ಅಲ್ಲಿ ತೆಲುಗು ಇಂಗ್ಲಿಷ್ ಗಣಿತ ಚರಿತ್ರೆ ಭೂಗೋಳ ಮೊದಲಾದ ಪಠ್ಯಗಳನ್ನು ಅಭ್ಯಾಸ ಮಾಡಿದ್ದವರು. ಹೀಗೆ ಕಮಲಾಪುರದಲ್ಲಿ ಇವರ ಬಾಲ್ಯದ ವಿದ್ಯಾಭ್ಯಾಸ ಪ್ರಾರಂಭವಾಯಿತು. ಕಮಲಾಪುರದ ಗ್ರಾಮದಲ್ಲಿ ನಡೆಯುತ್ತಿದ್ದ ಹರಿಕಥೆ ಜಾತ್ರೆ ನೋಡಿ ಆಟಗಳು ಮೊದಲಾದವುಗಳನ್ನು ನೋಡಿ ಬೆಳೆದವರು. ಇವರ ಮನೆತನದಲ್ಲಿ ಶಿಷ್ಯ ಸಂಚಾರ ಪದ್ಧತಿ ಇದ್ದುದರಿಂದ ಇವರ ತಾತನವರೊಂದಿಗೆ ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳಲ್ಲಿ ಹಲವಾರು ಗ್ರಾಮಗಳಿಗೆ ಹೋಗಿ ಬರುತ್ತಿದ್ದರು. ಕಮಲಾಪುರದಲ್ಲಿ ಪ್ಲೇಗು ಮಲೇರಿಯಾ ಬಂದಾಗ ಜನರು ಊರನ್ನು ಬಿಟ್ಟು ಹತ್ತಿರದ ಉದ್ಯಾನ ವೀರಭದ್ರ ಗುಡಿಯ ಸ್ಥಳದಲ್ಲಿ ಕ್ಯಾಂಪನ್ನು ಹಾಕಿದಾಗ ರಾಮಚಂದ್ರರು ಕ್ಯಾಂಪಿನ ಹುಡುಗನಾಗಿದ್ದು ಅಲ್ಲಿಯ ಪರಿಸರದ ಚಿರತೆ, ಕರಡಿ, ಪ್ರಾಣಿ ಪಕ್ಷಿಗಳನ್ನು ಹತ್ತಿರದಿಂದ ಕಂಡವರು.





ರಾಮಚಂದ್ರ ಇವರ ನಾಲ್ಕನೇ ತರಗತಿ ಮುಗಿದ ಮೇಲೆ ಇವರನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗೆ ಬಳ್ಳಾರಿಗೆ ಸೇರಿಸಿದರು. ಇವರ ಸಂಬಂಧಿಕರ ಶಾಲೆಯಲ್ಲಿ ಕಠಿಣ ಶಿಕ್ಷೆಗಳಿಂದ ಇವರು ಬಳ್ಳಾರಿಯನ್ನು ಬಿಟ್ಟು ಕಮಲಪುರಕ್ಕೆ ವಾಪಸ್ ಬಂದರು. ಆಗ ಹಂಪಿಯ ಕೋದಂಡ ರಾಮ ದೇವಸ್ಥಾನದಲ್ಲಿ ಸಂಸ್ಕೃತ ವಿದ್ವಾಂಸರು, ಪಂಡಿತರಾಗಿದ್ದ





ಕೃಷ್ಣಮಾಚಾರ್ಯರ ಹತ್ತಿರ ಸಂಸ್ಕೃತ ಕಲಿಯಲು ಇವರ ತಾತ ಇವರನ್ನ ಅವರ ಬಳಿ ಬಿಟ್ಟರು. ಅಲ್ಲಿ ಕೆಲ ಕಾಲ ಸಂಸ್ಕೃತ ಕಲಿತು ಮತ್ತೆ ಆನೆಗುಂದಿಯಲ್ಲಿ ಸಂಸ್ಕೃತ ವಿದ್ಯಾಭ್ಯಾಸ, ಅಲ್ಲಿಂದ ತಿರುಪತಿಗೆ ಹೋಗಿ ಅಲ್ಲಿ ವಾರದ ಮನೆಯಲ್ಲಿ ಉಂಡು ಸಂಸ್ಕೃತ ಕಾಲೇಜಿಗೆ ಸೇರಿ ವಿದ್ಯಾಭ್ಯಾಸ ಮಾಡಿದವರು. ಮುಂದೆ ಲಾಹೋರಿನಲ್ಲಿ ಪದವಿಯನ್ನು, ಪಂಜಾಬ್ ವಿಶ್ವವಿದ್ಯಾಲಯದ ಹಿಂದಿ ಪ್ರಭಾಕರ್ ಹಾಗೂ ಆಯುರ್ವೇದ ಭೂಷಣ ಪದವಿಗಳನ್ನು ಪಡೆದಿದವರು.

ಈ ಮಧ್ಯದಲ್ಲಿ ಸ್ವತಂತ್ರ ಹೋರಾಟದಲ್ಲಿಯೂ ಇವರ ಪಾಲ್ಗೊಂಡು ಮುಂದೆ ಕೋರ್ಟ್ ಮಾರ್ಷಲ್ ಹಾಗೂ ಲಾಹೋರಿನಲ್ಲಿ ಹಲವಾರು ಉದ್ಯೋಗ ಗಳನ್ನು ಮಾಡಿ ಮಿಲಿಟರಿಗೂ ಸೇರೀ ಸೇವೆ ಸಲ್ಲಿಸಿದ್ದವರು. ಮುಂದೆ ಗೆಳೆಯನ ಸಲಹೆಯಂತೆ ನೇಪಾಳಕ್ಕೆ ಹೊರಡಲು ಯೋಚಿಸಿದಾಗ ಸುಭಾಷ್ ಚಂದ್ರ ಬೋಸರ ಸೇನಯಲ್ಲಿದ್ದಿದರಿಂದ ಗೆಳೆಯನನ್ನು ಪೋಲಿಸರು ಬಂಧಿಸಿದ್ದರು. ಇದು ತಿಳಿಯದೆ ವಾರಗಟ್ಟಲೇ ಗಂಗಾನದಿ ನೀರನ್ನು ಕುಡಿದು ಬದುಕಿದವರು. ನಂತರ ದೆಹಲಿಯಲ್ಲಿ ಡೆಯಲಿ ಟೆಲಿಗ್ರಾಫ್ ಪತ್ರಿಕೆಯಲ್ಲಿ ಉದ್ಯೋಗಕ್ಕೆ ಸೇರಿಕೊಂಡರು. ನಂತರ ಆಂಧ್ರ ಪ್ರದೇಶಕ್ಕೇ ಬಂದು ಪತ್ರಿಕೋದ್ಯಮದಲ್ಲಿ ಉದ್ಯೋಗ ಪಡೆದು ನೆಲೆನಿಂತವರು. ಇವರ ಕಷ್ಟ ಸುಖಗಳಲ್ಲಿ ಭಾಗಿಯಾಗಿದ್ದವರು ಇವರ ಪತ್ನಿ ಶ್ರೀಮತಿ ಅನಂತ ಲಕ್ಷ್ಮಿ. ಮಕ್ಕಳು ಡಾ.ನೀರಜ್ ಚಕ್ರವರ್ತಿ, ಡಾ.ಅಮುಕ್ತಮಾಲ್ಯದ, ಡಾ.ಶೇಷಸಾಯಿ.

ತೆಲುಗು ಪತ್ರಿಕೋದ್ಯಮದಲ್ಲಿ, ಸಾಹಿತ್ಯದಲ್ಲಿ ಅಪಾರವಾದ ಸೇವೆ ಸಲ್ಲಿಸಿ ಅಂಕಣಕಾರರಾಗಿ, ಲೇಖಕರಾಗಿ, ಸಾಹಿತಿಯಾಗಿ, ಅನುವಾದಕರಾಗಿ ತಮ್ಮದೇ ಆದ ಕೊಡುಗೆಗಳನ್ನು ಸಲ್ಲಿಸಿ ತೆಲುಗು ಸಾಹಿತ್ಯದಲ್ಲಿ ಪ್ರಸಿದ್ಧರಾದವರು. ತೆಲುಗಿನಲ್ಲಿ ಬರೆದ ಹಂಪಿ ನುಂಚಿ ಹರಪ್ಪದಾಕ ಎಂಬ ಇವರು ಆತ್ಮ ಚರಿತೆ ಅತ್ಯಂತ ಜನಪ್ರಿಯವಾಗಿ ಮೂರು ಮುದ್ರಣಗಳನ್ನು ಕಂಡಿದೆ. ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ಲಭಿಸಿದೆ. ಈ ತೆಲುಗಿನ ಕೃತಿಯನ್ನು ಹಂಪಿಯಿಂದ ಹರಪ್ಪಾದವರೆಗೆ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದ ಮಾಡಿದ್ದಾರೆ ಕನ್ನಡದ ಹೆಸರಾಂತ ವಿದ್ವಾಂಸರು, ಶಾಸನ ತಜ್ಞರಾದ ಡಾ.ಶೇಷಶಾಸ್ತ್ರೀಗಳು. ಈ ಕೃತಿಯನ್ನು ಅತ್ಯಂತ ಸುಂದರವಾಗಿ ಮತ್ತು ಸಮರ್ಪಕವಾಗಿ ಅನುವಾದಿಸಿದ್ದಾರೆ .ಇದನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ ಎನ್ನುವುದಕ್ಕಿಂತ ಕನ್ನಡದಲ್ಲಿ ಬಹು ಸುಂದರವಾಗಿ ಚಿತ್ರಿಸಿದ್ದಾರೆ. ತಿರುಮಲ ರಾಮಚಂದ್ರ ಇವರ ಬಾಲ್ಯದಿಂದ 30 ವರ್ಷದವರೆಗಿನ ಈ ಆತ್ಮ ಚರಿತೆಯನ್ನು ಅತ್ಯಂತ ಕುತೂಹಲ ಮತ್ತು ರೋಚಕವಾಗಿ ನಮಗೆ ಕಟ್ಟಿಕೊಟ್ಟಿದ್ದಾರೆ. ಈ ಪುಸ್ತಕದಲ್ಲಿ 61 ಲೇಖನಗಳಿದ್ದು ಹಂಪಿಯಿಂದ ಹರಪ್ಪದವರೆಗೆ ಹಾಗೂ ವಿವಿಧ ಸಂದರ್ಭಗಳನ್ನು ಕುರಿತು ಬರೆಯಲಾಗಿದೆ. ತಿರುಮಲ ರಾಮಚಂದ್ರ ಇವರ ನಿಧನದ ನಂತರ ಕನ್ನಡದ ಈ ಕೃತಿ ಪ್ರಕಟವಾಗಿದೆ. ಇಂತಹ ಕೃತಿಯನ್ನು ಕನ್ನಡದ ಓದುಗರಿಗೆ ಕೊಟ್ಟಿದ್ದಕ್ಕಾಗಿ ಡಾ.ಶೇಷಶಾಸ್ತ್ರೀಗಳಿಗೆ ಅಭಿನಂದನೆಗಳು ಹಾಗೂ ಧನ್ಯವಾದಗಳುಸಲ್ಲುತ್ತವೆ.

ಕೇವಲ 30 ವರ್ಷದ ತಮ್ಮ ಬದುಕಿನ ಚರಿತ್ರೆಯನ್ನು ಬರೆದು ದೇಶದಾದ್ಯಂತ ಪ್ರಸಿದ್ಧಿ ಪಡೆದಿದ್ದ ತಿರುಮಲ ರಾಮಚಂದ್ರ ಇವರು ಕನ್ನಡ ಸಾಹಿತ್ಯಗಳ ಕುರಿತು ಕನ್ನಡ ಸಾಹಿತ್ಯ ಕುರಿತು ತೆಲುಗಿನಲ್ಲಿ ಬರೆಯಬೇಕೆಂಬ ಆಲೋಚನೆಯಲ್ಲಿ ಇದ್ದವರು. ಆದರೆ ಇದ್ದಕ್ಕಿದ್ದ ಹಾಗೆ 12.10.1997ರಂದು ನಮ್ಮನ್ನು ಅಗಲಿಬಿಟ್ಟರು ಆಗ ಅವರಿಗೆ 84 ವರ್ಷಗಳಾಗಿದ್ದವು. ಅವರ ನಿಧನ ಸುದ್ದಿಯನ್ನು ಆಂಧ್ರದ ಪತ್ತಿಕೆಗಳು ಮುಖಪುಟದಲ್ಲಿ ಪ್ರಕಟಿಸಿ, ಅವರ ಕಾರ್ಯವನ್ನು ಕುರಿತು ವಿಶೇಷ ಲೇಖನಗಳನ್ನು ಪ್ರಕಟಿಸಿದ್ದವು. ಹಂಪಿಯಿಂದ ಹರಪ್ಪದವರಿಗೆ ದೇಶವನ್ನು ಸುತ್ತಾಡಿ ಬಹುಭಾಷೆ, ಬಹುಸಂಸ್ಕೃತಿಯನ್ನು ಬಲವರಾಗಿದ್ದವರು.



ಕಮಲಾಪುರದಲ್ಲಿ ಬಾಲ್ಯ ಕಳೆದ ಮನೆ ಮತ್ತು ಮನೆ ಎದುರಗಡೆ ಇದ್ದ ವೀರಭದ್ರ ದೇವಸ್ಥಾನದಲ್ಲಿ ಅಕ್ಷರಭ್ಯಾಸ ಮಾಡಿದ್ದರು.


Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಬಜೆಟ್ ಆಯವ್ಯಯದಲ್ಲಿ ಶಿಕ್ಷಣಕ್ಕೆ ಅತ್ಯಲ್ಪ ಹೆಚ್ಚಳ ಗುಣಮಟ್ಟದ ಶಿಕ್ಷಣಕ್ಕಿಲ್ಲ ಮೊದಲ ಆದ್ಯತೆ

## ಕೇಂದ್ರ ಬಜೆಟ್ ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.,
ಅಭಿವೃದ್ಧಿ ಶಿಕ್ಷಣ ತಜ್ಞ






ಎಂದಿನಂತೆ ಶಾಲಾ ಶಿಕ್ಷಣವು ಆಯವ್ಯಯದಲ್ಲಿ ಅತ್ಯಲ್ಪ ಹೆಚ್ಚಳವನ್ನು ಪಡೆದಿದೆ 18 ವರ್ಷ ವಯಸ್ಸಿನವರೆಗೆ ಎಲ್ಲಾ ಮಕ್ಕಳಿಗೆ ಸಮಾನ ಗುಣಮಟ್ಟದ ಶಿಕ್ಷಣವು ದೇಶದ ಸುಸ್ಥಿರ ಅಭಿವೃದ್ಧಿಗೆ ಅಡಿಪಾಯವಾಗಿದೆ. ಇದು ದೊಡ್ಡ ಸಾರ್ವಜನಿಕ ಒಳಿತು ಮತ್ತು ಸಾಮಾಜಿಕ ಪರಿವರ್ತನೆಗೆ ಪೂರ್ವಾಪೇಕ್ಷಿತವಾಗಿದೆ. ಆದಾಗ್ಯೂ, ಕೇಂದ್ರ ಸರ್ಕಾರದ ಗೌರವಾನ್ವಿತ ಹಣಕಾಸು ಸಚಿವರು ಇಂದು (ಫೆಬ್ರವರಿ 1, 2025) ಮಂಡಿಸಿದ ಬಜೆಟ್ ನಲ್ಲಿ ವಿಕಸಿತ ಭಾರತದಲ್ಲಿ ಶೇಕಡಾ ನೂರರಷ್ಟು ಉತ್ತಮ ಗುಣಮಟ್ಟದ ಶಾಲಾ ಶಿಕ್ಷಣದ ಭರವಸೆಯನ್ನು ನಡುವೆಯೇ ಶಿಕ್ಷಣವು ಸಾಮಾಜಿಕ ಪರಿವರ್ತನೆಗೆ ಪ್ರಬಲ ಸಾಧನವೆಂಬುದನ್ನು ಪರಿಗಣಿಸಲು ಪೂರ್ಣ ವಿಫಲವಾಗಿದೆ.

2025–26ನೇ ಸಾಲಿನ ಒಟ್ಟು ಬಜೆಟ್ ಅಂದಾಜು ರೂ.50,65,345 ಕೋಟಿ ಇದರಲ್ಲಿ ಶಿಕ್ಷಣಕ್ಕೆ 1,28,650 ಕೋಟಿ ನೀಡಲಾಗಿದೆ. 2024–25ರ ಬಜೆಟ್ ಅಂದಾಜಿಗೆ (ರೂ.1,25,638) ಹೋಲಿಸಿದರೆ, ಹೆಚ್ಚಳವು ಕೇವಲ 3012 ಕೋಟಿ. ಒಟ್ಟು ಶಿಕ್ಷಣ ಸಚಿವಾಲಯದ ಬಜೆಟ್ ನಲ್ಲಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ (ಡಿಎಸ್ ಇ & ಎಲ್) ಪಾಲು ರೂ. 78,572 ಕೋಟಿ. 2024–25ರ ಬಜೆಟ್ ಅಂದಾಜಿಗೆ (73008) ಹೋಲಿಸಿದರೆ, ಹೆಚ್ಚಳವು ಸುಮಾರು ರೂ.5564 ಕೋಟಿ. ಶೇಕಡಾವಾರು ಲೆಕ್ಕದಲ್ಲಿ, ಇದು 7.62 ರಷ್ಟಿದೆ. ಕೇಂದ್ರ ಬಜೆಟ್ನಲ್ಲಿ ಒಟ್ಟಾರೆ ಶಿಕ್ಷಣಕ್ಕೆ ದೊರೆತಿರುವ ಹಣ ಶೇಕಡಾ 2.54 ರಷ್ಟಿದ್ದು, ಇದರಲ್ಲಿ ಶಾಲಾ ಶಿಕ್ಷಣದ ಪಾಲು ಶೇಕಡಾ 1.55 ರಷ್ಟಿದೆ.

ಭಾರತದಲ್ಲಿನ ಶಾಲಾ ಶಿಕ್ಷಣದ ಗಾತ್ರ ಮತ್ತು ಎಲ್ಲಾ ಮಕ್ಕಳಿಗೆ ಸಮಾನ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವ ಮೂಲಕ ದೇಶಾದ್ಯಂತ ಸಾರ್ವಜನಿಕ ಶಿಕ್ಷಣವನ್ನು ಸಮಗ್ರ ರೀತಿಯಲ್ಲಿ ಬಲಪಡಿಸುವಲ್ಲಿ ಕೇಂದ್ರ ಸರ್ಕಾರದ ಮುಂದಿರುವ ಸವಾಲುಗಳಿಗೆ ಹೋಲಿಸಿದರೆ. ಹಾಗು ಸಮಾನ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಇದು ಅತ್ಯಲ್ಪ ಹೆಚ್ಚಳ ಮಾತ್ರವಲ್ಲ, ನಗಣ್ಯ ಮತ್ತು ಅಸಮರ್ಪಕವಾಗಿದೆ.

ಹಣಕಾಸು ಸಚಿವರು ತಮ್ಮ ಬಜೆಟ್ ಭಾಷಣದಲ್ಲಿ ವಿಕಸಿತ ಭಾರತವು ಶೇಕಡಾ ನೂರರಷ್ಟು ಉತ್ತಮ ಗುಣಮಟ್ಟದ ಶಾಲಾ ಶಿಕ್ಷಣವನ್ನು ಒಳಗೊಂಡಿದೆ ಎಂದು ಹೇಳುತ್ತಾರೆ. ಆದರೆ ರಾಷ್ಟ್ರೀಯ ಪ್ರಾಮುಖ್ಯತೆಯ ಯೋಜನೆ ಮತ್ತು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ 2009 ರ ಅನುಷ್ಠಾನದ ಪ್ರಮುಖ ಕಾರ್ಯಕ್ರಮವಾದ ಸಮಗ್ರ ಶಿಕ್ಷಣ ಅಭಿಯಾನಕ್ಕೆ ಬಜೆಟ್ ಕೇವಲ ರೂ. 41,249 ಕೋಟಿ ನೀಡಿದ್ದಾರೆ . ಹಿಂದಿನ ಬಜೆಟ್ ಅಂದಾಜಿಗೆ (37499) ಹೋಲಿಸಿದರೆ, ಹೆಚ್ಚಳವು ಕೇವಲ ರೂ.3750 ಕೋಟಿ. ಶೇಕಡಾವಾರು ಲೆಕ್ಕದಲ್ಲಿ, ಹೆಚ್ಚಳವು ಸುಮಾರು 10%. ನಮಗೆ ತಿಳಿದಿರುವಂತೆ, ಸಂವಿಧಾನದ ಅನುಚ್ಛೇದ 21 ಎ ಅಡಿಯಲ್ಲಿ, ಶಿಕ್ಷಣವು ಮೂಲಭೂತ ಮತ್ತು ನ್ಯಾಯಸಮ್ಮತ ಹಕ್ಕು. ಈ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಣವನ್ನು ಹೂಡಿಕೆ ಮಾಡುವ ಜವಾಬ್ದಾರಿಯನ್ನು ಕೇಂದ್ರ ಸರ್ಕಾರ ನುಣುಚಿಕೊಳ್ಳುತ್ತಿದೆ.

ಭಾರತದಲ್ಲಿ, ನಮಗೆ ತಿಳಿದಿರುವಂತೆ, ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿದೆ; ಶಿಕ್ಷಣವನ್ನು ಒದಗಿಸುವ ಜವಾಬ್ದಾರಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊಂದಿವೆ. ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಶಾಲೆಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳನ್ನು ನಿರ್ವಹಿಸುತ್ತವೆ. ಉದಾಹರಣೆಗೆ, ಪ್ರಸಕ್ತ ಬಜೆಟ್ ನಲ್ಲಿ, ಫೆಡರಲ್ ಸರ್ಕಾರವು ರೂ. ಸಮಗ್ರ ಶಿಕ್ಷಣ ಅಭಿಯಾನಕ್ಕಾಗಿ ರೂ.41249 ಕೋಟಿ ರೂ.ಗಳನ್ನು ಆರ್‌ಟಿಇ ಕಾಯ್ದೆಯ ಅನುಷ್ಠಾನಕ್ಕಾಗಿ 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳ ನಡುವೆ ಹಂಚಿಕೊಂಡಿದೆ. ಈ ಅಲ್ಪ ಹಂಚಿಕೆಯೊಂದಿಗೆ ಶಿಕ್ಷಣದ ಮೂಲಭೂತ ಹಕ್ಕನ್ನು ಜಾರಿಗೊಳಿಸಲು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ದುಃಸ್ಥಿತಿಯನ್ನು ಊಹಿಸ ಬಹುದಾಗಿದೆ. ಲಭ್ಯವಿರುವ ಮಾಹಿತಿಯ ಪ್ರಕಾರ, ರಾಷ್ಟ್ರಮಟ್ಟದಲ್ಲಿ ಆರ್‌ಟಿಇ ಕಾಯ್ದೆಯ ಅನುಸರಣೆ ಶೇಕಡಾ 25.5 ರಷ್ಟಿದೆ. ಆರ್‌ಟಿಇ ಕಾಯ್ದೆಯ ಸೆಕ್ಷನ್ 19 ಮತ್ತು 25ರ ಪ್ರಕಾರ ಇದು 2013ರ ವೇಳೆಗೆ ಪೂರ್ಣಗೊಳ್ಳಬೇಕಿತ್ತು.

ಸಂಕ್ಷಿಪ್ತವಾಗಿ ಹೇಳುವುದಾದರೆ, 2025–26ರ ಬಜೆಟ್ ಅಂದಾಜುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಫೆಡರಲ್ ಸರ್ಕಾರವು ಸಾಮಾನ್ಯವಾಗಿ ಶಾಲಾ ಶಿಕ್ಷಣಕ್ಕಾಗಿ ಮತ್ತು ನಿರ್ದಿಷ್ಟವಾಗಿ ಶಿಕ್ಷಣದ ಮೂಲಭೂತ ಹಕ್ಕನ್ನು ಸಾಕಾರಗೊಳಿಸಲು ವರ್ಷದಿಂದ ವರ್ಷಕ್ಕೆ ತನ್ನ ಹೂಡಿಕೆಯನ್ನು ತೀವ್ರವಾಗಿ ಕಡಿಮೆ ಮಾಡುತ್ತಿದೆ ಎಂದು ತೋರಿಸುತ್ತದೆ. ಇದರ ನೇರ ಪರಿಣಾಮವೆಂದರೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಆರ್ಥಿಕವಾಗಿ ದುರ್ಬಲ ವಾಗುತ್ತವೆ, ಇದರ ಪರಿಣಾಮವಾಗಿ ಆಯಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಕ್ಕಳ ಶಿಕ್ಷಣದ ಮೂಲಭೂತ ಹಕ್ಕನ್ನು ಬಡವರು ಅಥವಾ ಜಾರಿಗೆ ತರಲಾಗುವುದಿಲ್ಲ. ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿದ್ದರೂ, ಕೇಂದ್ರ ಸರ್ಕಾರವು ತನ್ನ ಸಾಂವಿಧಾನಿಕ ಆದೇಶವನ್ನು ತ್ಯಜಿಸಿದೆ ಮತ್ತು ಆ ಮೂಲಕ ಹಣಕಾಸಿನ ಹಕ್ಕನ್ನು ಅರಿತುಕೊಳ್ಳುವಲ್ಲಿ ರಾಜ್ಯಗಳನ್ನು ಕಡೆಗಣಿಸಿದೆ. ಒಟ್ಟಾರೆ ಯಾಗಿ, ಗುಣಮಟ್ಟದ ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲು ಸಾಂವಿಧಾನಿಕ ಹಕ್ಕನ್ನು ಜಾರಿಗೊಳಿಸುವಲ್ಲಿ ಇದು ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಅಸಹಾಯಕ ಸ್ಥಿತಿಗೆ ತಳ್ಳುತ್ತಿದೆ.

## ಕವಿ ಮನಸು

### ತಿಮ್ಮನು ಜಾತ್ರೆಗೆ ಹೋಗಿದ್ದ....

ಅಮ್ಮನ ಜೊತೆಗೆ ತಿಮ್ಮನು ಒಮ್ಮೆ
ಜಾತ್ರೆಗೆ ಹೋಗಿದ್ದ....
ಹಿಂಡಿಂಡಾಗಿ ಸೇರಿದ ಜನರ
ಕಂಡು ಬೆರಗಾದ....

ಕಳೆದು ಗಿಳೆದು ಹೋದೆನು ಎಂದು
ಅಮ್ಮನ ಕೈ ಹಿಡಿದ....
ಒಬ್ಬನೇ ಎಲ್ಲೋ ಹೋಗದೆ ಭಯದಿ
ಅಮ್ಮನ ಜೊತೆಗಿದ್ದ.....

ದೂರದಿ ನಿಂತು ಹೋಗೋ ತೇರಿಗೆ
ಬಾಳೆಯ ಹಣ್ಣೆಸೆದ...
ಕರಗಳ ಜೋಡಿಸಿ ದೇವಗೆ ನಮಿಸಿ
ಒಳಿತನು ಮಾಡೆಂದ.

ವಿಧ ವಿಧವಾದ ಗೊಂಬೆಯ ಕಂಡು
ತನಗೂ ಬೇಕೆಂದ....
ಕೀಲಿಯ ಗೊಂಬೆ ಓಡುವ ಕಾರನು
ಕೊಂಡು ಖುಷಿಪಟ್ಟ....


ಬೆಂಡು ಬತ್ತಾಸು ಖಾರ ಮಂಡಕ್ಕಿ
ಎಲ್ಲರ ಜೊತೆ ಸವಿದ....
ಐಸು ಗೀಸು ಬೇಡ ಅಂದಾಗ
ಮುನಿಸನು ಮಾಡ್ಕೊಂಡ....

ಸಂಜೆಯಾಗುತಲಿ ಮನೆಯ ಕಡೆಗೆ
ಅಮ್ಮನ ಜೊತೆ ನಡೆದ...
ಜಾತ್ರೆಲಿ ತಾನು ಕಂಡುದನೆಲ್ಲ
ತಾತನಿಗೇಳ್ಕೊಂಡ.....

– ಶೇಖರಯ್ಯ ಟಿ ಎಚ್ ಎಂ
ಗೆದ್ದಲಗಟ್ಟೆ, ಕೂಡ್ಲಿಗಿ

### ನೆನಪಿನ ಟಾನಿಕ್

ಒಮ್ಮೆ ಓದಿದರೂ, ಅದರ ಅರ್ಥವನ್ನು ಗ್ರಹಿಸಲು ಪುನರಾವರ್ತನೆ ಮಾಡಿ ಓದಿದ ವಿಷಯದ ಬಗ್ಗೆ ಪ್ರಶ್ನೆಗಳನ್ನು ಹಾಕಿಕೊಂಡು ಅರ್ಥೈಸಿಕೊಳ್ಳಿ



### ತುಂಗಭದ್ರಾ ನೀರಿನ ಮಟ್ಟ

ಶನಿವಾರ : 01–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1616.72 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9560 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 52.615 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1588.34 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 355 ಕ್ಯುಸೆಕ್ |
| ಸಾಮರ್ಥ್ಯ | 9.702 ಟಿಎಂಸಿ |

### ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

02–02–2025 – ಭಾನುವಾರ

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉತ್ತರಾಷಾಡ |
| ಯೋಗ | : ಶಿವ |
| ಕರಣ | : ವಿಷ್ಟಿ |
| ಸೂರ್ಯೋದಯ | : 07:07:40 |
| ಸೂರ್ಯಾಸ್ತ | : 18:13:54 |
| ರಾಹು ಕಾಲ | : 16:51–18:14 |
| ಯಮಘಂಡ ಕಾಲ | : 12:41–14:04 |
| ಗುಳಿಕ ಕಾಲ | : 15:27–16:51 |

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

# ಮಧ್ಯಮ ವರ್ಗಕ್ಕೆ ಬಂಪರ್ ಬಜೆಟ್ ಪ್ರವಾಸೋದ್ಯಮಕ್ಕೂ ವರದಾನ


2025–26ನೇ ಬಜೆಟ್‌ನ್ನು ವಿತ್ತ ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಇವರು 6 ಲಕ್ಷ ಕೋಟಿ ಬಜೆಟ್‌ನ್ನು ಮಂಡಿಸಿರುತ್ತಾರೆ. ಈ ಬಜೆಟ್ ನಲ್ಲಿ ಕೃಷಿ, ಎಂ.ಎಸ್.ಎಂ.ಇ ಹೂಡಿಕೆ ಹಾಗೂ ರಫ್ತು ಮೂಲಸ್ಥಂಬ ಆಧರಿಸಿ ಗರೀಬ, ಯುವ , ಅನ್ನದಾತ ಮತ್ತು ನಾರಿ (Poor , Youth, Farmers Woman) ಆಧರಿಸಿ ಈ ಬಜೆಟ್‌ನ್ನು ಮಂಡಿಸಿದ್ದಾರೆ. ಪ್ರಧಾನಮಂತ್ರಿ ಧನ ಧಾನ್ಯ ಕ್ರಷಿ ಯೋಜನಾ ಇದರಲ್ಲಿ 100 ಜಿಲ್ಲೆಯ ಕಡಿಮೆ ಉತ್ಪಾದನೆ ಉಳ್ಳವ ಬೆಳೆ, ಕಡಿಮೆ ಇಳುವರಿ ಇವರಿಗೆ ಸಾಲ ನೀಡುವುದು, ಇದರಿಂದ 1.7ಕೋಟಿ ರೈತರಿಗೆ ಅನುಕೂಲವಾಗಲಿದೆ. ಕಿಸಾನ ಕ್ರೆಡಿಟ್ ಕಾರ್ಡ ನಲ್ಲಿ ಒಟ್ಟು 7.7.ರಷ್ಟು ರೈತರಿಗೆ ಸಾಲ ಹಾಗೂ ಸಾಲದ ಮಿತಿಯನ್ನು 3 ಲಕ್ಷದಿಂದ 5ಲಕ್ಷಕ್ಕೆ ಏರಿಸಲಾಗಿದೆ. ಎಂ.ಎಸ್.ಎಂ.ಇ 5 ಕೋಟಿಯಿಂದ 10 ಕೋಟಿಗೆ ಸಾಲದ ಮಿತಿ, ಹಾಗೂ ಸ್ಟಾರ್ಟಪ್‌ಗಳಿಗೆ 10 ರಿಂದ 20 ಕೋಟಿ ವರೆಗೆ ಹೆಚ್ಚಿಸಲಾಗಿದೆ.

ಪ್ರವಾಸೋದ್ಯಮ ವಲಯಕ್ಕೆ 50 ಪ್ರವಾಸಿ ತಾಣಗಳನ್ನು ಭಾರತದಲ್ಲಿ ಗುರುತಿಸಿ, ರಾಜ್ಯ ಸರಕಾರದ ಜೊತೆಗೆ ಒಡಂಬಡಿಕೆ ಮೂಲಕ ತೀವ್ರ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು, ಮುದ್ರಾ ಸಾಲದ ಅಡಿಯಲ್ಲಿ ಹೋಮ್ ಸ್ಟೇಗಳು, ಸ್ವಚ್ಚ ಶೌಚಾಲಯ ಮತ್ತು ಮಾರುಕಟ್ಟೆ ಹಾಗೂ ಇ–ವಿಸಾಗಳಿಗೆ ಸುವ್ಯವಸ್ಥೆ ಸೌಲಭ್ಯಗಳನ್ನು ಒದಗಿಸಲಾಗಿದೆ.

ವೈಯಕ್ತಿಕ ಆದಾಯದ ತೆರಿಗೆ ವಿನಾಯಿತಿ ಮಿತಿ ಏರಿಕೆ . ಈಗಿರುವ ಹೊಸ ಸ್ಕೀಮ್ ಪ್ರಕಾರ ತೆರಿಗೆಗೆ ವಿನಾಯಿತಿ ಇರುವ ಆದಾಯದ ಮಿತಿಯನ್ನು ಪ್ರಸ್ತುತ 7 ಲಕ್ಷದಿಂದ 12ಲಕ್ಷದವರೆಗೆ ಏರಿಸಲಾಗಿದೆ. ಅಂದರೆ ಪ್ರತಿತಿಂಗಳು 1 ಲಕ್ಷ ಆದಾಯ ಇರುವವರಿಗೂ ಆದಾಯ ತೆರಿಗೆ ವಿನಾಯಿತಿ ಇರುತ್ತದೆ. ಹಾಗೂ ವೇತನದಾರರಿಗೆ ಸ್ಟ್ಯಾಂಡರ್ಡ ಡಿಡಕ್ಷನ್ ಮೊತ್ತದ ಮಿತಿಯನ್ನು 75 ಸಾವಿರ ಮಿತಿಯನ್ನು ಮುಂದಿನ 5 ವರ್ಷಕ್ಕೂ ವಿಸ್ತರಿಸಲಾಗಿದ್ದು, ಇದರಿಂದ ವೇತನದಾರರಿಗೆ ರೂ. 12.75 ಲಕ್ಷಗಳವರೆಗೆ ಆದಾಯ ತೆರಿಗೆ ಇರುವುದಿಲ್ಲ. ಹಾಗೆಯೇ 60 ವರ್ಷ ಮೀರಿದ ಹಿರಿಯ ನಾಗರಿಕರಿಗೆ ಬ್ಯಾಂಕಿನಲ್ಲಿ ಇರುವ ಠೇವಣಿಗಳ ಮೇಲೆ ಬರುವ ಬಡ್ಡಿ ಆದಾಯದ ಆದಾಯಕ್ಕೆ ರೂ. 1 ಲಕ್ಷಗಳವರೆಗೂ ತೆರಿಗೆ ಕಡಿತ ಇರುವುದಿಲ್ಲ. ಅದೇ ರೀತಿ ಭಾಡಿಗೆ ಆದಾಯದ ಮೇಲೆ ಈಗಿರುವ ವಾರ್ಷಿಕ 2.40 ಲಕ್ಷದಿಂದ 6 ಲಕ್ಷಗಳವರೆಗೆ ತೆರಿಗೆ ಕಡಿತದ ಮಿತಿಯನ್ನು ಏರಿಸಲಾಗಿದೆ. ಈ ಎಲ್ಲ ತೆರಿಗೆ ಉಳಿತಾಯದ ಪ್ರಸ್ತಾವನೆಗಳು ಮಧ್ಯಮ ವರ್ಗದವರಿಗೆ ಉತ್ತೇಜನಕಾರಿಯಾಗಿವೆ. ಇದರಿಂದ ಅವರ ಪ್ರತಿ ತಿಂಗಳ ಜೀವನ ವೆಚ್ಚಕ್ಕಾಗಿ ಹೆಚ್ಚು ಹಣವು ಕೈಯಲ್ಲಿ ಉಳಿಯುವಂತೆ ಅನುಕೂಲ ಮಾಡಿ ಕೊಡಲಾಗಿದೆ. ಅದೇ ರೀತಿ ವಿದೇಶಿಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ವಿದೇಶಕ್ಕೆ ಹಣವನ್ನು ಕಳುಹಿಸುವ ಮಿತಿಯನ್ನು ಯಾವುದೇ ತೆರಿಗೆ ಕಡಿತವಿಲ್ಲದೇ ಈಗಿರುವ 7.5 ಲಕ್ಷದ ಮಿತಿಯಿಂದ 10ಲಕ್ಷಕ್ಕೆ ಏರಿಸಲಾಗಿದೆ. ಇವೆಲ್ಲ 2025–6ನೇ ಸಾಲಿನ ಉತ್ತಮ ಅಂಶಗಳುಳ್ಳ ಹಾಗೂ ಮಧ್ಯಮ ವರ್ಗದ ಜನರು ನಿರಾಳತೆಯನ್ನು ಹೊಂದುವ ಅಂಶಗಳುಳ್ಳ ಮುಂಗಡಪತ್ರವೆಂದು ಹೇಳಬಹುದು.

ಬೀದಿ ಬದಿ ವ್ಯಾಪಾರಿಗಳಿಗೆ ಕ್ರೆಡಿಟ್ ಕಾರ್ಡ ವಿತರಣೆ ಹಾಗೂ ಸಾಲ ಸೌಲಭ್ಯದ ವಿಸ್ತರಣೆಯ ಪ್ರಸ್ತಾವನೆಗಳನ್ನು ಈ ಮುಂಗಡ ಪತ್ರದಲ್ಲಿ ಸೇರಿಸಲಾಗಿದೆ.

ಜಲಜೀವನ ಮಿಶನ್ ಯೋಜನೆಯನ್ನು 2028ರವರೆಗೆ ವಿಸ್ತರಿಸಲಾಗಿದ್ದು, ಇದಕ್ಕೆ ತೆಗೆದಿರಿಸಲಾದ ಹಣವನ್ನು ಹೆಚ್ಚಿಸಲಾಗಿದೆ. ಈ ಯೋಜನೆಯಿಂದ ಶೇ 100ರಷ್ಟು ಯಶಸ್ವಿಗೊಳಿಸಲು ಪ್ರಸ್ತಾವನೆಯನ್ನು ಮುಂದುವರೆಸಿರುವುದು ಉತ್ತಮ ಕ್ರಮವಾಗಿದೆ ಕ್ಯಾನ್ಸರ ರೋಗಿಗಳಿಗೆ ಬಹಳಷ್ಟು ಸೌಲಭ್ಯಗಳನ್ನು ಒದಗಿಸಿ ಅದರಲ್ಲಿ ಕ್ಯಾನ್ಸರ ಔಷಧಿಗಳಿಗೆ ಕಡಿಮೆ ರಿಯಾಯಿತ ಹಾಗೂ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತ ತಪಾಸಣೆ ಕೇಂದ್ರ ಸ್ಥಾಪನೆ ಹೀಗೆ ಒಟ್ಟಾರೆ ಇದೊಂದು ಮಧ್ಯಮ ವರ್ಗದವರಿಗೆ ಅನುಕೂಲಕರವಾಗಿರುವಂತಹ ಬಜೆಟ್ ಮಂಡನೆ ಆಗಿದೆ ಎಂದು ಭಾವಿಸುತ್ತೇವೆ. ನಾವು ವಿಜಯನಗರ ಜಿಲ್ಲಾ ವಾಣಿಜ್ಯ ಹಾಗೂ ಕೈಗಾರಿಕೋದ್ಯಮ ಸಂಘ ಹೊಸಪೇಟೆ ಈ ಬಜೆಟ್‌ನ್ನು ಸ್ವಾಗತಿಸುತ್ತೇವೆ.



– ಆಶ್ವಿನ ಕೋತಂಬ್ರಿ ಅಧ್ಯಕ್ಷರು
ವಿಜಯನಗರ ಜಿಲ್ಲಾ ವಾಣಿಜ್ಯ ಹಾಗೂ
ಕೈಗಾರಿಕಾ ಸಂಘ, ಹೊಸಪೇಟೆ

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
www.hampitimes.com



ಕೇಂದ್ರದ ಈ ಬಾರಿಯ ಬಜೆಟ್ ಎಲ್ಲಾ ವರ್ಗದವರನ್ನು ಕೇಂದ್ರಿಕರಿಸಿದಂತಿದೆ. ದೇಶದ ಎಲ್ಲಾ ಜಿಲ್ಲಿಗಳಲ್ಲಿ ಕ್ಯಾನ್ಸರ್ ಆಸ್ಪತ್ರೆ, ಎಂಎಸ್ ಎಂಇ ಉದ್ಯಮಿದಾರರ ಉತ್ತೇಜನ, ಬಡ್ಡಿ ರಹಿತ ರೈತರ ಸಾಲ, ಆರೋಗ್ಯ ಕಾರ್ಡ್ ಸೇರಿ ಹಲವು ಮಹತ್ತರ ಜನ ಸಾಮಾನ್ಯರ ಬಜೆಟ್ ಮಂಡೆಯಾಗಿದ್ದು, ಪ್ರಧಾನಿ ಮೋದಿಯವರು ಈ ವರ್ಷದ ಸಂಕ್ರಾಂತಿ ಗಿಫ್ಟ್ ನೀಡಿದ್ದಾರೆ.

– ಕಿಚಿಡಿ ಕೊಟ್ರೇಶ್ ಅಧ್ಯಕ್ಷರು ಬಿಜೆಪಿ ಯುವ ಮೋರ್ಚಾ ವಿಜಯನಗರ ಜಿಲ್ಲೆ

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 47 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ನಿನ್ನ ಬಾಳಿಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

### ಭೂಗೋಳಶಾಸ್ತ್ರ ಅಧ್ಯಾಯ– 29 – ಭಾರತದ ನೈಸರ್ಗಿಕ ವಿಕೋಪಗಳು

1) ಕಡಲ ಕೊರೆತವನ್ನು ನಿಯಂತ್ರಿಸಲು ಬೆಳೆಯುವ ಅರಣ್ಯ ಯಾವುದು? ಉತ್ತರ:– ಮ್ಯಾಂಗ್ರೋವ್ ಅರಣ್ಯ

2) ನೈಸರ್ಗಿಕ ನೈಸರ್ಗಿಕ ವಿಕೋಪಗಳು ಎಂದರೇನು?
ಉತ್ತರ:– ಪ್ರಾಕೃತಿಕವಾಗಿ ಸಂಭವಿಸುವ ಮಾನವನ ಪ್ರಾಣ ಹಾನಿ ಆಸ್ತಿ–ಪಾಸ್ತಿ ಸೇರಿದಂತೆ ನೈಸರ್ಗಿಕ ಸಂಪತ್ತುಗಳ ವಿನಾಸಕಾರಿ ಘಟನೆಗಳನ್ನು ನೈಸರ್ಗಿಕ ವಿಕೋಪಳೇಂದು ಕರೆಯುವರು

3) ಕಡಲ ಕೊರೆತ ಎಂದರೇನು?
ಉತ್ತರ:– ಸಮುದ್ರದ ಅಲೆಗಳಿಂದ ಉಂಟಾಗುವ ತೀರ ಪ್ರದೇಶದ ಸವೆತಕ್ಕೆ ಕಡಲ ಕೊರೆತ ಎನ್ನುವರು.

4) ಭೂಕುಸಿತ ಎಂದರೇನು?
ಉತ್ತರ:– ಪರ್ವತ ಅಥವಾ ಬೆಟ್ಟಗಳ ಮೇಲ್ಭಾಗದಿಂದ ಕಡಿದಾದ ಇಳಿಜಾರಿನ ಗುಂಟ ಕೆಳಕ್ಕೆ ಜಾರುವ ಭೂ ರಾಶಿಗೆ ಭೂಕುಸಿತ ಎನ್ನುವರು.

5) ಭೂಕಂಪ ಎಂದರೇನು?
ಉತ್ತರ:– ಭೂಮಿಯ ಒಳಗಿನ ಆಂತರಿಕ ಶಕ್ತಿಯಿಂದ ಭೂಮಿಯ ಮೇಲ್ಪದರವು ಕಂಪಿಸುವುದನ್ನು ಭೂಕಂಪ ಎನ್ನುವರು.

6) ಪ್ರವಾಹಗಳು ಎಂದರೇನು?
ಉತ್ತರ:– ಅತ್ಯಧಿಕ ಮಳೆ ಸುರಿದಾಗ ಮತ್ತು ಅತ್ಯಧಿಕ ಪ್ರಮಾಣದಲ್ಲಿ ಹಿಮಕರಿಗೆದಾಗ ನದಿಗಳ ನೀರಿನ ಪ್ರಮಾಣವೂ ಅವುಗಳ ಪಾತ್ರದ ಸಾಮರ್ಥ್ಯಕಿಂತಲೂ ಹೆಚ್ಚಾಗಿ ನದಿ ದಂಡೆಗಳ ಇಕ್ಕೆಲೆಗಳಲ್ಲಿ ಉಕ್ಕಿ ಹರಿಯುವುದನ್ನು ಪ್ರವಾಹಗಳೆಂದು ಕರೆಯುವರು

7) ಪ್ರಾಕೃತಿಕ ವಿನಾಶಕಾರಕಗಳು ಯಾವುವು?
ಉತ್ತರ:– ಚಂಡಮಾರುತ, ಪ್ರವಾಹ, ಭೂಕುಸಿತ, ಕಡಲ ಕೊರೆತ ಭೂಕಂಪ, ಕ್ಷಾಮ, ಹಿಮಪಾತ & ಮೇಘಸ್ಫೋಟ

8) ಭೂಕುಸಿತಕ್ಕೆ ಕಾರಣಗಳು ಯಾವುವು?
ಉತ್ತರ:– ಪರ್ವತ ಮತ್ತು ಸಮುದ್ರ ತೀರದಲ್ಲಿ ಹರಿಯುವ ನೀರು, ರಸ್ತೆ–ರೈಲು ಮಾರ್ಗಗಳ ನಿರ್ಮಾಣ,ಅತಿಯಾದ ಗಣಿಗಾರಿಕೆ.ಅತಿಯಾದ ಗಾಳಿ ಮತ್ತು ಮಳೆ, ಅರಣ್ಯ ನಾಶ

9) ಪ್ರವಾಹ/ ಚಂಡಮಾರುತ/ ಭೂಕುಸಿತ/ ಕಡಲ ಕೊರತ/ ಭೂಕಂಪದ ಪರಿಣಾಮಗಳು ಯಾವುವು? ಅಥವಾ ನೈಸರ್ಗಿಕ ವಿಕೋಪಗಳ ದುಷ್ಪರಿಣಾಮಗಳು ಯಾವುವು ?
ಉತ್ತರ:– ಅಪಾರ ಸಾವು ನೋವು, ಅಪಾರ ಆಸ್ತಿ–ಪಾಸ್ತಿಗಳಿಗೆ ಹಾನಿ, ಸಾರಿಗೆ–ಸಂಪರ್ಕ ಅಸ್ತವ್ಯಸ್ತ, ವಿದ್ಯುತ್ ಕಡಿತ, ರೋಗಗಳ ಹರಡುವಿಕೆ

10) ಚಂಡಮಾರುತ/ಪ್ರವಾಹ/ ಭೂಕಂಪ/ಕಡಲ ಕೊರೆತ ಉಂಟಾದಾಗ ಕೈಗೊಳ್ಳುವ ಪರಿಹಾರ ಕ್ರಮಗಳು ಯಾವುವು? ಅಥವಾ ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಕೈಗೊಳ್ಳಬಹುದಾದ ಮುನ್ನೆಚ್ಚರಿಕೆ ಕ್ರಮಗಳು ಯಾವುವು?
ಉತ್ತರ:– ಸಿದ್ಧಪಡಿಸಿದ ಆಹಾರ, ಶುದ್ಧ ಕುಡಿಯುವ ನೀರಿನ ಪೂರೈಕೆ, ವೈದ್ಯಕೀಯ ಸೌಲಭ್ಯ, ತಾತ್ಕಾಲಿಕ ವಸತಿ, ಅಗತ್ಯ ಮೂಲಭೂತ ಸೌಕರ್ಯ ಒದಗಿಸುವುದು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ನೆರವನ್ನು ಪಡೆಯುವುದು, ಜನರಿಗೆ ತಿಳುವಳಿಕೆ ನೀಡುವುದು

### ಸಮಾಜ ವಿಜ್ಞಾನ ಪ್ರಶ್ನೆ ಪತ್ರಿಕೆ ವಿನ್ಯಾಸ

ವಿಭಾಗವಾರು ಮತ್ತು ಪ್ರಶ್ನಾವಾರು ಅಂಕಗಳ ಹಂಚಿಕೆ

| ವಿಭಾಗ | ಒಟ್ಟು | |
|---|---|---|
| | ಪ್ರಶ್ನೆ | ಅಂಕ |
| ಇತಿಹಾಸ | 11 | 25 |
| ರಾಜ್ಯಶಾಸ್ತ್ರ | 5 | 11 |
| ಸಮಾಜ ಶಾಸ್ತ್ರ | 5 | 8 |
| ಭೂಗೋಳಶಾಸ್ತ್ರ | 9 | 22 |
| ಅರ್ಥಶಾಸ್ತ್ರ | 4 | 7 |
| ವ್ಯವಹಾರ ಅಧ್ಯಯನ | 4 | 7 |
| ಒಟ್ಟು | 38 | 80 |

ಪಶ್ನೆ ಪತ್ರಿಕೆ ಸ್ವರೂಪ

| ಪ್ರಶ್ನೆಯ ವಿಧ | ಪ್ರಶ್ನೆಗಳ ಸಂಖ್ಯೆ | ಅಂಕ | ಒಟ್ಟು ಅಂಕಗಳು |
|---|---|---|---|
| ಬಹು ಆಯ್ಕೆ ಪ್ರಶ್ನೆ | 8 | 1 | 8 |
| 1 ಅಂಕದ ಪ್ರಶ್ನೆ | 8 | 1 | 8 |
| 2 ಅಂಕದ ಪ್ರಶ್ನೆ | 8 | 2 | 16 |
| 3 ಅಂಕದ ಪ್ರಶ್ನೆ | 9 | 3 | 27 |
| 4 ಅಂಕದ ಪ್ರಶ್ನೆ | 4 | 4 | 16 |
| 5 ಅಂಕದ ಪ್ರಶ್ನೆ | 1 | 5 | 5 |
| ಒಟ್ಟು | 38 | – | 80 |

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ) ಮೊ:9916567120

ಸಾಯಿಮಣಿ ಪ್ರಕಾಶನ, ಹೊಸಪೇಟೆ

ಮೈಕ್ರೋ ನ್ಯೂಸ್

## ಇಂದು ಜಿಲ್ಲೆಯಲ್ಲಿ ಎನ್.ಎಂ.ಎಂ.ಎಸ್. ಪರೀಕ್ಷೆ: ನಿಷೇಧಾಜ್ಞೆ ಜಾರಿ

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಮುನಿರಾಬಾದ್ ಕೊಪ್ಪಳ ಇವರ ವತಿಯಿಂದ ಎನ್.ಎಂ.ಎಂ.ಎಸ್ (ನ್ಯಾಷ್ನಲ್ ಮೀನ್ಸ್-ಕಂ-ಮೇರಿಟ್ ಸ್ಕಾಲರ್‌ಶಿಪ್) ಪರೀಕ್ಷೆ ಫೆಬ್ರವರಿ 2 ರಂದು ಕೊಪ್ಪಳ ಜಿಲ್ಲೆಯಲ್ಲಿ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಎನ್.ಎಂ.ಎಂ.ಎಸ್ ಪರೀಕ್ಷೆಯು ಫೆ. 2ರ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಮತ್ತು ಮಧ್ಯಾಹ್ನ 2 ರಿಂದ 3.30 ಗಂಟೆಯವರೆಗೆ ಕೊಪ್ಪಳ ಜಿಲ್ಲೆಯ ಒಟ್ಟು 23 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಪರೀಕ್ಷೆಗಳನ್ನು ಸುಗಮ ಮತ್ತು ಶಾಂತಿಯುತವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಅಂತರದ ಪ್ರದೇಶದಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163 ರನ್ವಯ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ನಿಷೇಧಾಜ್ಞೆ ಜಾರಿಯನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್.ಟಿ.ಡಿ. ಮೊಬೈಲ್, ಪೇಜರ್, ಜರಾಕ್ಸ್, ಟೈಪಿಂಗ್ ಮುಂತಾದವುಗಳನ್ನು ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಹಾಗೂ ನಿಯೋಜಿತ ಶಿಕ್ಷಕರನ್ನು ಜಾಗೃತ ದಳದವರನ್ನು ಹೊರತುಪಡಿಸಿ ಇನ್ನುಳಿದವರಿಗೆ ಪರವಾನಿಗೆ ಇಲ್ಲದೆ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದನ್ನು ನಿಷೇಧಿಸಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವುದನ್ನು ನಿಷೇಧಿಸಿದೆ. ಈ ಆದೇಶವು ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ವಯವಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.







# ಮಾದರಿ ಆಸ್ಪತ್ರೆಗೆ ಅರ್ಹ ಕೋಗಳಿ ಪ್ರಾಥಮಿಕ ಆರೋಗ್ಯ ಕೇಂದ್ರ

## ಸೇವೆ, ಸ್ವಚ್ಛತೆ, ನಿರ್ವಹಣೆಯಲ್ಲಿ ಖಾಸಗಿ ಆಸ್ಪತ್ರೆಗೆ ಕಮ್ಮಿ ಇಲ್ಲ | ಆರೋಗ್ಯ ಇಲಾಖೆಯ ನಿರ್ದೇಶಕಿ ಡಾ.ತ್ರಿವೇಣಿ ಎಂ.ಜಿ ಪ್ರಶಂಸೆ

**ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ಕೋಗಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವು ಸ್ವಚ್ಛತೆ, ವೈದ್ಯಾಧಿಕಾರಿಗಳ ಸೇವೆ ಹಾಗೂ ನಿರ್ವಹಣೆಯಲ್ಲಿ ಉತ್ತಮವಾಗಿದ್ದು ಖಾಸಗಿ ಆಸ್ಪತ್ರೆಗೆಗಳಿಗೆ ಸರಿಸಾಟಿ ಎಂಬಂತೆ ಸರ್ಕಾರಿ ಆಸ್ಪತ್ರೆಯನ್ನು ಇಟ್ಟುಕೊಂಡಿರುವುದು ಪ್ರಶಂಸನೀಯ. ಇದು "ಮಾದರಿ ಆಸ್ಪತ್ರೆ" ಹೆಸರಿಗೆ ಅರ್ಹ. ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿರ್ದೇಶಕಿ ಡಾ.ತ್ರಿವೇಣಿ ಎಂ.ಜಿ ಪ್ರಶಂಸೆ ವ್ಯಕ್ತಪಡಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ತಾಲೂಕು ಆರೋಗ್ಯ ಕೇಂದ್ರ, ಕೋಗಳಿ ಪ್ರಾ.ಆ.ಕೇಂದ್ರ ದಲ್ಲಿ ಶನಿವಾರ ಹಮ್ಮಿಕೊಂಡಿದ್ದ "ಮಾದರಿ ಲಸಿಕಾ ಕೇಂದ್ರದ ಉದ್ಘಾಟನೆ" ನೆರವೇರಿಸಿ ನಂತರ ಸಂಪೂರ್ಣ ಆಸ್ಪತ್ರೆಯನ್ನು ಪರಿಶೀಲಿಸಿ ಮಾತನಾಡಿದರು.

ಅಧಿಕಾರಿಗಳು, ಸಾರ್ವಜನಿಕರು ಎನ್ನದೆ ಹೊರಗಡೆ ತಿರುಗಾಡಿದ ಪಾದರಕ್ಷೆಗಳನ್ನು ಆಸ್ಪತ್ರೆಯೊಳಗೆ ನಿಷೇಧಿಸಿಧಿಸಲಾಗಿದೆ. ಇದಕ್ಕೆ ಜನರು ಸಹಕರಿಸಿದ್ದಾರೆ. ರೋಗಿಗಳ ಆರೋಗ್ಯದ ಹಿತದೃಷ್ಠಿಯಿಂದ ಉತ್ತಮ ಬೆಳವಣಿಗೆ ಜತೆಗೆ ರೋಗಿಗಳೇ ಬಟನ್ ಒತ್ತಿ ಯಂತ್ರ ದಿಂದ ಟೋಕನ್ ಪಡೆದುಕೊಳ್ಳುವುದು ಇಲ್ಲಿನ ಮತ್ತೊಂದು ವಿಶೇಷ. ಆಸ್ಪತ್ರೆಗೆ ಬರುವ ಪುಟಾಣಿಗಳ ಸಮಾದಾನಕ್ಕೆ ಪುಟಾಣಿ ಕಿಡ್ಸ್ ಕೋಣೆ ಹಾಗೂ ತಾಯಿ ಹಾಲುಣಿಸಲು ಪ್ರತ್ಯೇಕ ಕೋಣೆ ನಿರ್ಮಿಸಿದ್ದಾರೆ. ಹಾಗೆ 24 ಗಂಟೆಗಳು ಇಲ್ಲಿ ಹೆರಿಗೆ ಸೌಲಭ್ಯ ಇದೆ. ಮಹಿಳೆಯರನ್ನು ಹೆರಿಗೆಗೆ ಉಚಿತವಾಗಿ ಕರೆ ತರುವುದು ಮತ್ತು ಮರುಳಿ ಕಳಿಸುವ ಕಾರ್ಯವನ್ನು ಸೇರಿದಂತೆ ಎಲ್ಲಾ ರೀತಿಯ ಪ್ರಗತಿ ಇಲ್ಲಿದೆ ಎಂದರು.




ಈ ಆಸ್ಪತ್ರೆಗೆ 3 ಬಾರಿ ಕಾಯಕಲ್ಪ ಪ್ರಶಸ್ತಿ ದೊರೆತಿರುವುದು ನಿಜಕ್ಕೂ ಅರ್ಹ. ಈ ಪ್ರಶಸ್ತಿಯ ಗರಿಮೆ, ಹಿರಿಮೆ ಗೌರವಗಳು ಇಲ್ಲಿನ ಡಾ.ಗಂಗಾ ಮತ್ತು ಅವರ ಸಿಬ್ಬಂದಿಗಳ ಶ್ರಮಕ್ಕೆ ದೊರೆತ ಫಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಲ್ಲಿನ ವೈದಾಧಿಕಾರಿ ಗಂಗಾ ಮತ್ತು ಅವರ ಸಿಬ್ಬಂದಿ ಆಸ್ಪತ್ರೆಯ ಪ್ರಗತಿಗೆ ಕಂಕಣ ಬದ್ಧರಾಗಿ ನಿಂತಿದ್ದಾರೆ. ಇಲ್ಲಿನ ಅಭಿವೃದ್ಧಿ ಅವಲೋಕಿಸಿದಾಗ ರಾಜ್ಯದ ಆಸ್ಪತ್ರೆಗಳಿಗೆ ಇದು ಮಾದರಿ ಆಸ್ಪತ್ರೆ ಎಂಬುದನ್ನು ನೋಡಿದರು ಒಪ್ಪಿಕೊಳ್ಳುತ್ತಾರೆ ಎಂದರು.

ಇದಕ್ಕೂ ಮುನ್ನ ಆಸ್ಪತ್ರೆ ದಾಖಲಾತಿ ಹಾಗೂ ಕಟ್ಟಡ ವಿನ್ಯಾಸ, ಆರ್ಥಿಕ ವೃಚ್ಚ, ಅಭಿವೃದ್ಧಿಗೆ ಆರ್ಥಿಕ ಮೂಲಗಳ ಬಗ್ಗೆ ಮಾಹಿತಿ ಕೇಳಿದಾಗ ಡಾ.ಗಂಗಾ ಅವರು ಸಮುದಾಯ ಜನರ ಸಹಕಾರ, ತಾಪಂ, ಜಿಪಂ ಹಾಗೂ ಶಾಸಕರ ಅನುದಾನ ಮತ್ತು ಆಸ್ಪತ್ರೆಯ ಅನುದಾನದಿಂದ ಹಾಗೂ ಸಿಬ್ಬಂದಿಗಳ ಶ್ರಮದಿಂದ ಅಭಿವೃದ್ಧಿ ಪಡಿಸಿರುವೆ ಎಂದು ಸಂಪೂರ್ಣ ಮಾಹಿತಿ ನೀಡಿದರು.

ಡಿಎಚ್‌ಒ ಶಂಕರನಾಯ್ಕ, ಆರ್.ಸಿ.ಎಚ್ ಡಾ. ಜಂಬಯ್ಯ, ಡಾ.ಪ್ರವೀಣ್ ಕುಮಾರ ಲಸಿಕಾ ಕೇಂದ್ರ ಪ್ರಾರಂಭ ಮತ್ತು ಸುವ್ಯವಸ್ಥೆಯ ಬಗ್ಗೆ ಮಾಹಿತಿ ನೀಡಿದರು. ಈ ವೇಳೆ ಡಾ.ಷಣ್ಮೂಖ ನಾಯ್ಕ ತಾಲೂಕು ಅಧಿಕಾರಿಗಳು ಹಾಗೂ ಆಸ್ಪತ್ರೆಯ ಸಿಬ್ಬಂದಿ ಶ್ರೀನಿವಾಸ, ಲ್ಯಾಬ್ ಟೆಕ್ನೀಷನ್, ಆಸ್ಪತ್ರೆಯ ಶೃಶೂಷ್ಯಕಿಯರು, ಆಶಾ ಕಾರ್ಯಕರ್ತೆಯರು ಸೇರಿದಂತೆ ಆಸ್ಪತ್ರೆಯಲ್ಲಿ ಒಟ್ಟು 30 ಸಿಬ್ಬಂದಿಗಳು ಹಾಜರಿದ್ದರು.



ಕೋಗಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರ ಜಿಲ್ಲೆಯ ಹೆಮ್ಮೆಯ ಕೇಂದ್ರ. ಇದು ರಾಜ್ಯದಲ್ಲಿ 3 ಬಾರಿ ಕಾಯಕಲ್ಪ ಪ್ರಶಸ್ತಿ ಹಾಗೂ 1 ಬಾರಿ ಎನ್.ಕ್ಯೂ.ಎಸ್ ಪ್ರಶಸ್ತಿ ಲಭಿಸಿದ್ದು, ನಿರ್ದೇಶಕರ ಅಭಿಪ್ರಯ ದಂತೆ ಇದೊಂದು 'ಮಾದರಿ ಆಸ್ಪತ್ರೆ' ಇಲ್ಲಿನ ಪ್ರಗತಿ, ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲಿ ಅಭಿವೃದ್ಧಿ ಮಾಡುವಂತೆ ಅಲ್ಲಿನ ವೈದ್ಯಾಧಿಕಾರಿಗಳಿಗೆ ಸೂಚಿಸಿರುವೆ. ಈ ಆಸ್ಪತ್ರೆಯ ಅಭಿವೃದ್ಧಿಗೆ ನಮ್ಮ ಸಹಕಾರ ಸದಾ ಇರುತ್ತದೆ.

– **ಶಂಕರನಾಯ್ಕ**, ಡಿ.ಎಚ್.ಒ
ವಿಜಯನಗರ ಜಿಲ್ಲೆ.

ಕೋಗಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 8 ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದು ಇಲ್ಲಿದ್ದ ಹಳೆಯ ಕಟ್ಟಡದಲ್ಲಿ ಓಪಿಡಿ ತಪಾಸಣೆ ಸೇರಿದಂತೆ ಇತರೆ ಕಾರ್ಯಗಳಿಗೆ ಸಮಸ್ಯೆ ಆಗಿತ್ತು. ಜನರು ಹಾಗೂ ಜನಪ್ರತಿನಿಧಿಗಳ ಸಹಕಾರ ಪಡೆದು ಇದನ್ನು ಅಭಿವೃದ್ಧಿ ಪಡಿಸಲಾಗಿದೆ. ಜಿಲ್ಲಾ, ತಾಲೂಕು ಅಧಿಕಾರಿಗಳ ಸಹಕಾರ ಹಾಗೂ ಸಿಬ್ಬಂದಿಗಳ ಪರಿಶ್ರಮದಿಂದ ಆಸ್ಪತ್ರೆ ಎಲ್ಲರ ಮೆಚ್ಚುಗೆಗೆ, ಪ್ರಶಸ್ತಿಗಳಿಗೆ ಪಾತ್ರವಾಗಿದೆ.

– **ಡಾ.ಗಂಗಾ.ಎಂ**
ಪ್ರಾಥಮಿಕ ಆರೋಗ್ಯ ಕೇಂದ್ರ ಕೋಗಳಿ ,
ಕೊಟ್ಟೂರು ತಾಲೂಕು, ವಿಜಯನಗರ ಜಿಲ್ಲೆ

# ಮೈಕ್ರೋ ಫೈನಾನ್ಸಗಳಿಂದ ಬಡವರಿಗೆ ಅನಾವಶ್ಯಕ ತೊಂದರೆ ಕೊಟ್ರೆ ಕ್ರಮಕೈಗೊಳ್ಳಿ

## ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಸೂಚನೆ

**ಹಂಪಿ ಟೈಮ್ಸ್ ಕೊಪ್ಪಳ**

ಮೈಕ್ರೋ ಫೈನಾನ್ಸಗಳು ನಿಯಮ ಉಲ್ಲಂಘನೆ ಮಾಡಿ ಬಡವರಿಗೆ ಅನಾವಶ್ಯಕವಾಗಿ ತೊಂದರೆ ನೀಡಿ ಹಣ ವಸೂಲಿಮಾಡುವ ಪ್ರಕರಣಗಳು ಜಿಲ್ಲೆಯಲ್ಲಿ ಕಂಡು ಬಂದರೆ ಅಧಿಕಾರಿಗಳು ತಕ್ಷಣ ಅಂತವರ ಮೇಲೆ ಕ್ರಮ ಜರುಗಿಸಬೇಕೆಂದು ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಹೇಳಿದರು.

ಅವರು ಶುಕ್ರವಾರ ಸಂಜೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಮೈಕ್ರೋ ಫೈನಾನ್ಸಗಳ ಹಾವಳಿ ತಡೆಗಟ್ಟುವ ಕುರಿತು ಅಧಿಕಾರಿಗಳಿಗೆ ಕರೆದ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಎಷ್ಟು ಮೈಕ್ರೋ ಫೈನಾನ್ಸಗಳು ರಜಿಸ್ಟರ್ ಆಗಿವೆ, ರಜಿಸ್ಟರ್ ಆಗದೆ ಇರುವವು ಎಷ್ಟು, ಅವುಗಳು ಕಾನೂನು ಚೌಕಟ್ಟಿನ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆಯೆ ಎಂದು ಮಾಹಿತಿ ಪಡೆಯಬೇಕು. ಇಲ್ಲಿಯವರೆಗೆ ಈ ಕುರಿತು ಯಾವುದಾದರು ಪ್ರಕರಣಗಳು ಜಿಲ್ಲೆಯಲ್ಲಿ ದಾಖಲಾಗಿದ್ದರೆ ಮಾಹಿತಿ ನೀಡಿ ಎಂದು ಪೊಲೀಸ್ ಅಧಿಕಾರಿಗಳಿಗೆ ಹೇಳಿದರು.



ಕೆಲವೊಂದು ಫೈನಾನ್ಸಗಳು ನಿಯಮ ಉಲ್ಲಂಘನೆ ಮಾಡಿ ಹಣ ವಸೂಲಿ ಹಾಗೂ ದಿನದ ಬಡ್ಡಿ ಹಾಕುವವರು ಇದ್ದಾರೆ ಅಂಥವರ ಮೇಲೆ ಒಂದು ಕಣ್ಣು ಇಡಿ ಇದು ವಿಶೇಷವಾಗಿ ನೀರಾವರಿ ಭಾಗದ ಗಂಗಾವತಿ. ಕಾರಟಗಿ ಸೇರಿದಂತೆ ಇತರೆ ಕಡೆ ಹೆಚ್ಚಾಗಿ ಕಂಡು ಬರುತ್ತದೆ. ವ್ಯಾಪಾರ ವಹಿವಾಟಿಗೆ ಬ್ಯಾಂಕ್ ಮತ್ತು ಫೈನಾನ್ಸಗಳು ಬೇಕು ಆದರೆ ಅವು ತಮ್ಮ ಇತಿಮಿತಿ ಹಾಗೂ ನಿಯಮ ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕು. ಕಂದಾಯ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ಬಡವರಿಗೆ ತೊಂದರೆ ನೀಡಿ ಹಣ ವಸೂಲಿ ಮಾಡುವ ಫೈನಾನ್ಸಗಳಿಗೆ ಎಚ್ಚರಿಕೆ ನೀಡಬೇಕೆಂದು ಹೇಳಿದರು.

ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಮಾತನಾಡಿ ಸಾರ್ವಜನಿಕರು ಮೈಕ್ರೋ ಫೈನಾನ್ಸಗಳಿಂದ ಸಾಲ ಪಡೆಯುವ ಮುಂಚೆ ಫೈನಾನ್ಸಗಳ ಬಡ್ಡಿದರ. ಇಎಂಐ ಮತ್ತು ಮರುಪಾಯತಿ ನಿಯಮಗಳ ಮಾಹಿತಿಯನ್ನು ಮೊದಲು ಸಂಪೂರ್ಣವಾಗಿ ತಿಳಿದುಕೊಂಡ ನಂತರ ತಮಗೆ ಸರಿ ಅನಿಸಿದಾಗ ಮಾತ್ರ ಅವರಿಂದ ಸಾಲ ಪಡೆಯಬೇಕು ಮತ್ತು ತಮಗೆ ಎಷ್ಟು ಬೇಕು ಅಷ್ಟನ್ನೆ ಪಡೆಯಬೇಕು. ತಮ್ಮ ಸಾಲ ಮರುಪಾವತಿ ಮಾಡಲು ಅನುಕೂಲಕರವಾಗುವ ರೀತಿಯಲ್ಲಿ ಇದ್ದಾಗ ಮಾತ್ರ ಅದನ್ನು ಹಿಂದಿರುಗಿಸಲು ಸಾಧ್ಯ. ಯಾವುದೇ ಫೈನಾನ್ಸ ಪ್ರಕರಣಗಳು ಪೊಲೀಸ್ ಠಾಣೆಯಲ್ಲಿ ದಾಖಲಾದಾಗ ಅವರು ತಮ್ಮ ನಿಯಮಗಳು ಪಾಲನೆ ಮಾಡಿದ್ದಾರೆಯೆ ಹಾಗೂ ಅವರ ಮೈಕ್ರೋ ಫೈನಾನ್ಸಗಳ ನಿಯಮ ಏನಿವೆ ಎಂದು ಪೊಲೀಸ್ ಇಲಾಖೆಯ ಅಧಿಕಾರಿಗಳು ಪರಿಶೀಲನೆ ಮಾಡುವ ಕೆಲಸ ಮೊದಲು ಮಾಡಬೇಕು ಅಂದಾಗ ನಿಜವಾದ ಮಾಹಿತಿ ತಮಗೆ ಸಿಗುತ್ತದೆ ಎಂದು ಹೇಳಿದರು.

ಈ ಸಭೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್ ಅರಸಿದ್ಧಿ. ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ. ಇಲಾಖೆಯ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

ರಸ್ತೆ ಮಾಡಲು ಬಂದ ಅಧಿಕಾರಿಗಳನ್ನ ತಡೆದ ಜಮೀನು ಮಾಲೀಕ

## ಜಮೀನಿನಲ್ಲಿ ರಸ್ತೆ ಇದ್ದರೆ ಸರ್ವೇ ಮಾಡಿ ಖಚಿತಪಡಿಸಿ ಕಾಮಗಾರಿ ಪ್ರಾರಂಭಿಸಿ

**ಹಂಪಿ ಟೈಮ್ಸ್ ಕೊಟ್ಟೂರು.**

ಇಟಿಗಿ-ಕೊಟ್ಟೂರು ಮಾರ್ಗಕ್ಕೆ ಸೇರುವ ತಾಲೂಕಿನ ಕೋಗಳಿ ರಸ್ತೆಯ ಅಭಿವೃದ್ಧಿಗೆ ಲೋ.ಕೋ ಇಲಾಖೆ ಮುಂದಾಗಿದ್ದು ಕೋಗಳಿ ಗ್ರಾಮದ ರೇವಣಸಿದ್ಧಪ್ಪ ಮತ್ತು ಇತರರು ತಮ್ಮ ಜಮೀನಿನಲ್ಲಿ ರಸ್ತೆ ಇದ್ದು ಸರ್ವೆ ಮಾಡಿ ರಸ್ತೆ ಖಚಿತ ಪಡಿಸಿಕೊಂಡು ಅಭಿವೃದ್ಧಿಗೆ ಮುಂದಾಗಬೇಕೆಂದು ಪಟ್ಟು ಹಿಡಿದು ರಸ್ತೆ ಕಾಮಗಾರಿ ತಡೆದರು.

ಈ ಹಿನ್ನೆಲೆ ಜಮೀನಿನ ಮಾಲಿಕರು ಕೊಟ್ಟೂರು ತಹಶಿಲ್ದಾರ ಅವರಿಗೆ ಸರ್ವೆ ಮಾಡಿ ರಸ್ತೆ ಖಚಿತ ಪಡಿಸಿಕೊಡುವಂತೆ ಮನವಿ ಕೋರಿದ್ದಾರೆ.ಈ ಮನವಿ ಮೇರಿಗೆ ಕ್ಷೇತ್ರದ ಶಾಸಕರು ಲೋ.ಕೋ ಇಲಾಖೆ ಎಇಇ ಅವರಿಗೆ ಸ್ಥಳ ಪರಿಶೀಲಿಸುವಂತೆ ಸೂಚಿಸಿದ್ದರು. ಕೂಡ್ಲಿಗಿ ಎಇಇ ನಾಗನಗೌಡ ಹಾಗೂ ಅವರ ತಂಡ ಶನಿವಾರ ಕೋಗಳಿ ಗ್ರಾಮಕ್ಕೆ ಭೇಟಿ ನೀಡಿ ರೇವಣಸಿದ್ದಪ್ಪ ಅವರೊಂದಿಗೆ ಚರ್ಚಿಸಿ ರಸ್ತೆ ಎಷ್ಟು ವರ್ಷದ್ದು ಎಂದಾಗ ಅಲ್ಲಿದ್ದ ಕೆಲ ಗ್ರಾಮದ ಹಿರಿಯರು ಸುಮಾರು 60 ವರ್ಷದ ರಸ್ತೆ ಎಂದು ಸ್ಪಷ್ಟ ಪಡಿಸಿದರು.

ಇದಕ್ಕೆ ಎಇಇ ಅವರು ಅಲ್ಲಿಂದ ಇಲ್ಲಿಯವರಿಗೂ ರಸ್ತೆ ಒತ್ತುವರಿ ಆಗಿರುವ ಗಮನಕ್ಕಿದ್ದಿಲ್ಲವೆ ಎಂದು ಪ್ರಶ್ನಿಸಿ ಮೊದಲಿನಿಂದಲೂ ಇಲ್ಲೇ ರಸ್ತೆ ಎಂದಿದ್ದು, ಅದರಂತೆ ಇಂದು ನಾವು ಊರಿನ ಅಭಿವೃದ್ಧಿಗೆ ಮುಂದಾಗಿದ್ದೇವೆ ತಾವು ಅಭಿವೃದ್ಧಿಗೆ ಸಹಕರಿಸಿ ಎಂದರು.

ಮಾಲಿಕ ರೇವಣಸಿದ್ಧಪ್ಪ ಮಾತನಾಡಿ, ಇಲ್ಲಿ ನನ್ನದೊಂದೇ ಜಾಗವಿಲ್ಲ ಬೇರೆಯವರದ್ದು ಇದೆ, ಇದು ಖರೀದಿಸಿದ ಜಮೀನು ಇತ್ತೀಚಿಗೆ ಅದ್ದುಬಸ್ತು ಮಾಡಿಸಿದಾಗ ರಸ್ತೆ ನಮ್ಮ ಜಮೀನಿನ ವ್ಯಾಪ್ತಿಯಲ್ಲಿರುವುದು ಸರ್ವೆಯರ್ ಗುರುತಿಸಿದ್ದರು, ಆ ಕಾರಣ ಕಾಮಗಾರಿ ತಡೆದಿದ್ದೇವೆ ಎಂದರು. ಈ ಮೊದಲು ಇದು ಬಂಡಿ ರಸ್ತೆ ಅದು ಎಲ್ಲಿ ಬರುತ್ತೆ. ತಹಶಿಲ್ದಾರ ಅವರಿಗೆ ಸರ್ವೆ ಮಾಡಿ ರಸ್ತೆ ಖಚಿತ ಪಡಿಸುವಂತೆ ಕೋರಿದ್ದೇವೆ. ಅವರು ಖಚಿತ ಪಡಿಸಿದ ನಂತರ ಅಭಿವೃದ್ಧಿ ಕೈಗೊಳ್ಳಿ ಅಲ್ಲಿಯವರಿಗೆ ಕಾಮಗಾರಿ ನಿಲ್ಲಿಸಿ ಎಂದು ಲೋ.ಕೋ ಇಲಾಖೆ ಎಇಇ ಅವರಿಗೆ ತಾಕೀತು ಮಾಡಿದರು.

# ಮಾಚೀದೇವ ಸಮಾಜದ ಕೊಳಕು ತೊಳೆದರು

## ಶಿಕ್ಷಣ ಸಮನ್ವಯಾಧಿಕಾರಿ ಎಸ್.ಎಸ್.ಜಗದೀಶ್ ಅಭಿಮತ



**ಹಂಪಿ ಟೈಮ್ಸ್ ಕೂಡ್ಲಿಗಿ**

ಶಿವ ಶರಣರು, ವಚನಕಾರರು ಸಮಾಜದ ಶಾಶ್ವತ ಆಸ್ತಿ. ಸಾಮಾಜಿಕ ಅಸಮಾನತೆ ಹೋಗಲಾಡಿಸುವ ಜತೆಗೆ ಜ್ಞಾನ ವಿಸ್ತರಣೆಗೆ ಅವರು ನೀಡಿದ ಕೊಡುಗೆ ಮಹತ್ತರವಾದುದು ಎಂದು ಶಿಕ್ಷಣ ಸಮನ್ವಯಾಧಿಕಾರಿ ಎಸ್.ಎಸ್.ಜಗದೀಶ್ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಶನಿವಾರ ತಾಲೂಕು ಆಡಳಿತ ಹಾಗೂ ಮಡಿವಾಳ ಸಮಾಜದ ವತಿಯಿಂದ ಏರ್ಪಡಿಸಿದ್ದ ಮಡಿವಾಳ ಮಾಚೀದೇವ ಜಯಂತಿಯಲ್ಲಿ ಮಾತನಾಡಿದರು. ವಿಶಾಲ ಮನೋಧರ್ಮ ಮಡಿವಾಳ ಸಮುದಾಯದ ಜನರಲ್ಲಿದೆ. ಶಿವಶರಣ ಮಾಚಿದೇವರ ಮಾರ್ಗ ದರ್ಶನದಿಂದ ಮುನ್ನಡೆಯುತ್ತಿರುವುದೇ ಇದಕ್ಕೆ ಕಾರಣ. ಮಾಚಿದೇವ ಸಮಾಜದ ಕೊಳಕು ತೊಳೆದು ಹಾಕಿದವರು. ಕಾಯಕದ ಆಧಾರದಲ್ಲಿ ವಿಭಜನೆ ಆಗುತ್ತಿರುವ ಸಮಾಜಕ್ಕೆ ಮಾಚಿದೇವರ ಸಂದೇಶ ಆದರ್ಶವಾಗಬೇಕಾದ ಅಗತ್ಯವಿದೆ ಎಂದರು. ಮಡಿವಾಳ ಸಮಾಜ ಶೈಕ್ಷಣಿಕವಾಗಿ ಮುಂದುವರಿದರೆ ಸಾಮಾಜಿಕ ವಾಗಿ,ಆರ್ಥಿಕವಾಗಿ ಸಬಲರಾಗುತ್ತಾರೆ. ರಾಜಕೀಯ ಮೀಸಲಾತಿ ಪಡೆದು ಎಲ್ಲಾ ಕ್ಷೇತ್ರದಲ್ಲಿಯೂ ಸಮಾಜದ ಮುಖ್ಯವಾಹಿನಿಗೆ ಬರುವಂತೆ ತಿಳಿಸಿದರು. ಮಡಿವಾಳ ಸಮಾಜದ ಕಾರ್ಯದರ್ಶಿ ಎಂ. ಅಂಜಿನಿ ಮಾತನಾಡಿದರು. ತಹಸೀಲ್ದಾರ್ ಎಂ. ರೇಣುಕಾ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ಗ್ರೇಡ್ 2 ತಹಸೀಲ್ದಾರ್ ವಿ.ಕೆ.ನೇತ್ರಾವತಿ,

ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ, ಮಡಿವಾಳ ಮಾಚೀದೇವ ಸಮಾಜದ ತಾಲೂಕು ಅಧ್ಯಕ್ಷ ಎಂ.ನಿಂಗಪ್ಪ, ಉಪಾಧ್ಯಕ್ಷ ಎಂ.ಬಸವರಾಜ, ಖಜಾಂಚಿ ಎಂ. ತಿರುಕಪ್ಪ, ಗೌರವಾಧ್ಯಕ್ಷ ಚೌಡಪುರ ಬಸವ ರಾಜಪ್ಪ, ಎಂ.ಹನುಮಂತಪ್ಪ, ರಮೇಶ, ತಿಮ್ಮಣ್ಣ, ವೀರೇಶ್, ಸುರೇಶ್, ಕುಮಾರಸ್ವಾಮಿ, ಹೊನ್ನೂರ ಸ್ವಾಮಿ, ನಿಂಗಪ್ಪ ಸೇರಿದಂತೆ ಸಿಬ್ಬಂದಿ ಇದ್ದರು.

